


ಕಲಿ-ಕಲಿಸು
AN ARTS EDUCATION TEACHER INITIATIVE
KALI-KALISU

# ಹೆಜ್ಜೆಗಳು

## ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಕಲಿಕಾ ಪ್ರಯೋಗಗಳು

2016–17



Over 20 Years of Celebrating the Arts
I F A
India Foundation for the Arts

citi
The Arts Education Programme
for the year 2017-18
is supported by Citi India

Over 20 Years of Celebrating the Arts

India Foundation for the Arts

I F A



ಕಲಿ-ಕಲಿಸು

AN ARTS EDUCATION TEACHER INITIATIVE


KALI-KALISU

# ಹೆಜ್ಜೆಗಳು

## ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಕಲಿಕಾ ಪ್ರಯೋಗಗಳು

**2016–17**





## ಶುಭಕೋರಿ


ಅರುಂಧತಿ ಘೋಷ್ 03
ಕೃಷ್ಣಮೂರ್ತಿ. ಟಿ.ಎನ್ 04

## ಸಂಪಾದಕೀಯ

ಸದಾನಂದ ಬೈಂದೂರ್
ಎಸ್. ಕಲಾಧರ 05


## ಕಲಾವಿದರ ಯೋಜನೆಗಳು

ಉನ್ನಿಕೃಷ್ಣನ್ 10
ಅಪರ್ಣಾ ಎಸ್. ದೇಶಪಾಂಡೆ 12
ಅರುಣ ಬಿ.ಟಿ. ಗೊಪ್ಪೇನಹಳ್ಳಿ 14
ಪೂರ್ಣ ಸರ್ಕಾರ್ 16
ಚನ್ನಕೇಶವ ಕಾಫಿ 18
ಅನುರಾಧ ಎಚ್.ಆರ್. 20
ಬಸವಲಿಂಗಯ್ಯ ಹಿರೇಮಠ್ 22



## ಶಿಕ್ಷಕರ ಯೋಜನೆಗಳು


ನಾಗರಾಜ ಎಂ ಹುಡೇದ 23
ಸಿದ್ದಪ್ಪ ಬಿರಾದಾರ 24
ಬಾಳಪ್ಪ ಈರಪ್ಪ ಚಿನಗುಡಿ 26
ಸತ್ಯನಾರಾಯಣ 27
ಜೆ ಎಂ ಚಪ್ಪರಮನಿ 28
ಡಾ. ಸತೀಶ್ ಕೆ.ಸಿ. 30


## ಯಶೋಗಾಥೆಗಳು


ಸುಬ್ಬಲಕ್ಷ್ಮಿ 31
ಎಂ ಜೆ ರಾಜೀವ ಗೌಡ 32
ಅಶೋಕ ತೊಟ್ನಳ್ಳಿ 34



## ಯೋಜನೆಗಳ ಆಹ್ವಾನ 36

## ಒಂದಷ್ಟು ಚಿತ್ರಗಳು 38



## ಶುಭ ಕೋರಿ...

ಇಂಡಿಯ ಫೌಂಡೇಷನ್ ಫಾರ್ ದಿ ಆರ್ಟ್ಸ್ ಸಂಸ್ಥೆಗೆ ಸಾರ್ಥಕತೆಯ ಕ್ಷಣಗಳಿವು. ನಮ್ಮ 'ಕಲಿ–ಕಲಿಸು' ಯೋಜನೆಯ ಭಾಗವಾಗಿ ಕರ್ನಾಟಕದ ಆಯ್ದ ಶಾಲೆಗಳಲ್ಲಿ ನಡೆದ ಕಲೆ ಮತ್ತು ಸಂಸ್ಕೃತಿಯ ಶೈಕ್ಷಣಿಕ ಸಂಯೋಜನೆಯು ನಿರಂತರ ಪ್ರಯತ್ನದ ಮೂಲಕ ಒಂದು ಮುಖ್ಯ ಕಾರ್ಯಕ್ರಮವಾಗಿ ಹೊರಹೊಮ್ಮಿದೆ. ಕರ್ನಾಟಕಕ್ಕೆ ವೈವಿಧ್ಯಮಯ ಹಾಗೂ ಶ್ರೀಮಂತ ಸಂಸ್ಕೃತಿಯ ಹಿನ್ನೆಲೆಯಿದೆ. ಕಾಲಾನುಕ್ರಮದಲ್ಲಿ ಈ ಮಣ್ಣಿನಲ್ಲಿ ಭಾಷೆ, ಸಂಗೀತ, ರಂಗಭೂಮಿ, ನೃತ್ಯ, ದೃಶ್ಯಕಲೆ ಇವೇ ಮುಂತಾದ ಕಲೆಗಳು ಅರಳಿವೆ. ಈ ಸೊಗಸಾದ ಕಲಾಪ್ರಕಾರಗಳು ಶಾಲಾ ಶಿಕ್ಷಣದೊಂದಿಗೆ ಮಿಳಿತಗೊಂಡ ಹಲವು ಕುತೂಹಲಕರ ಪ್ರಸಂಗಗಳು ಇಲ್ಲಿವೆ. ಇವು ನಮ್ಮ ಭರವಸೆಗಳು ಕೂಡ. ತರಗತಿಕೋಣೆಗಳನ್ನು ಜೀವಸೆಲೆಗಳನ್ನಾಗಿಸಬಲ್ಲ ಈ ಪ್ರಯೋಗಗಳು ಮಕ್ಕಳಿಗೆ ಜೀವಂತ ಅನುಭವಗಳನ್ನು ಧಾರೆಯೆರೆದಿವೆ. ಮಕ್ಕಳ ಸ್ವಾಭಾವಿಕ ಹಿನ್ನೆಲೆಗಳಿಗೆ ನ್ಯಾಯ ಒದಗಿಸುವ ಮೂಲಕ ಅವರ ಕಲಿಕೆಗಳಿಗೆ ಸ್ಫೂರ್ತಿಯನ್ನು ನೀಡಿದೆ. ಈ ನಮ್ಮ 'ಕಲಿ–ಕಲಿಸು ಹೆಜ್ಜೆಗಳು' ಪ್ರಥಮ ವಾರ್ಷಿಕ ಸಂಚಿಕೆಯನ್ನು ಕಲೆ ಮತ್ತು ಸಂಸ್ಕೃತಿಯ ಜೀವಂತ ಅನ್ವೇಷಣೆಗಳಿಗೆ ಅರ್ಪಿಸುತ್ತಿದ್ದೇವೆ. ಈ ಸಂಚಿಕೆಯನ್ನು ಸಾಧ್ಯವಾಗಿಸಿದ ಟಿ.ಎನ್.ಕೃಷ್ಣಮೂರ್ತಿ, ಎಸ್.ಕಲಾಧರ ಹಾಗೂ ಸದಾನಂದ ಬೈಂದೂರ್‌ರವರಿಗೆ ಶುಭ ಹಾರೈಸುತ್ತೇನೆ.



**ಅರುಂಧತಿ ಘೋಷ್**
ಕಾರ್ಯಕಾರಿ ನಿರ್ದೇಶಕರು
ಐ.ಎಫ್.ಎ. ಬೆಂಗಳೂರು

## ಶುಭ ಕೋರಿ...

ಕಲಿ ಕಲಿಸು ಎನ್ನುವುದು ಪಠ್ಯ ಬೋಧನಾ ಕಾರ್ಯದಲ್ಲಿ ಶಿಕ್ಷಕರು ಕಲಾ ಮಾಧ್ಯಮವನ್ನು ಅಳವಡಿಸಿಕೊಳ್ಳುವುದರ ಜೊತೆಯಲ್ಲೇ ವಿದ್ಯಾರ್ಥಿಗಳಲ್ಲಿ ಕಲಿಕೆ ಎನ್ನುವುದು ನಿರಂತರ ಕ್ರಿಯೆಯನ್ನಾಗಿಸುವ ಪ್ರಯತ್ನ. ಕತೆ, ಹಾಡು, ನಾಟಕ, ಮಾತು, ಚಿತ್ರಕಲೆ ಮತ್ತು ಇನ್ನಿತರ ಕಲಾ ಪ್ರಕಾರಗಳ ಮುಖಾಂತರ ಶಾಲಾ ಕೊಠಡಿಯನ್ನು ದಾಟಿ ಹೊರಜಗತ್ತಿನೊಂದಿಗೆ ಅನೂಹ್ಯ ಸಂಬಂಧವೊಂದನ್ನು ಗಟ್ಟಿಯಾಗಿ ಕಟ್ಟಿಕೊಡುವ ಸೃಜನಶೀಲ ನಡೆ. ಹಾಗೂ ಪಠ್ಯೇತರ ಚಟುವಟಿಕೆಗಳಿಂದ ವಿದ್ಯಾರ್ಥಿ ಕೇಂದ್ರೀಕೃತ ಕಲಿಕಾ ವ್ಯವಸ್ಥೆಯನ್ನು ತರುವ ಆಸೆ. ಹಾಗೆಯೇ ಸಮುದಾಯದ ಸಂಪನ್ಮೂಲಗಳನ್ನು ಶಾಲೆಗಳೊಂದಿಗೆ ಬೆಸೆಯುವ ಕಲಾ ಸಂಯೋಜಿತ ಕಾರ್ಯಕ್ರಮ.

ಈ ಸದುದ್ದೇಶವನ್ನು ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಕಳೆದ 8 ವರ್ಷಗಳಿಂದ ಸರ್ಕಾರಿ ಶಾಲಾ ಶಿಕ್ಷಕರುಗಳಿಗೆ ತರಬೇತಿಗಳು, ಅನುದಾನಗಳು ಮತ್ತು ವಿಚಾರ ಸಂಕಿರಣಗಳನ್ನು ಆಯೋಜಿಸುತ್ತಾ ಬರುತ್ತಿದೆ. ಇದುವರೆಗೂ ಸುಮಾರು ಸಾವಿರಕ್ಕೂ ಹೆಚ್ಚು ಶಿಕ್ಷಕರು ತರಬೇತಿಗಳಲ್ಲಿ ಭಾಗವಹಿಸಿದ್ದಾರೆ. ನಮ್ಮ ಪ್ರಯತ್ನಗಳಿಗೆ ಕೇಂದ್ರದ ಎನ್.ಸಿ.ಇ.ಅರ್.ಟಿ. ಕರ್ನಾಟಕ ಸರ್ಕಾರದ ಡಿ.ಎಸ್.ಇ.ಆರ್.ಟಿ. ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಗಳು ಪ್ರೋತ್ಸಾಹ ನೀಡಿವೆ. ಮುಂದಿನ ಮೂರು ವರ್ಷಗಳಲ್ಲಿ ಶಿಕ್ಷಕರಿಗಾಗಿ ಸನಿವಾಸ ಕಲಾ ಅಂತರ್ಗತ ತರಬೇತಿಗಳು, ಶಿಕ್ಷಕರು ಹಾಗೂ ಸಮುದಾಯಗಳನ್ನೊಳಗೊಂಡಂತೆ ಸನಿವಾಸ ಕಲಾ ಅಂತರ್ಗತ ತರಬೇತಿಗಳು, ಕಲಾ ಅಂತರ್ಗತ ಕಲಿಕೆಯನ್ನು ಅನುಕೂಲಿಸುವ ಸುಮಾರು 18 ಶಿಕ್ಷಕರಿಗೆ ತಲಾ ರೂಪಾಯಿ ಒಂದು ಲಕ್ಷದವರೆಗೆ ಅನುದಾನಗಳು, ರಾಷ್ಟ್ರ ಮಟ್ಟದ ವಿಚಾರ ಸಂಕಿರಣಗಳು ಹಾಗೂ ಪರಿಚಯಾತ್ಮಕ ಪ್ರವಾಸಗಳನ್ನು ಹಮ್ಮಿಕೊಳ್ಳುವ ಸದುದ್ದೇಶಗಳೊಂದಿಗೆ ಕಾರ್ಯ ಪ್ರವೃತ್ತರಾಗಿದ್ದೇವೆ.





**ಕೃಷ್ಣಮೂರ್ತಿ ಟಿ.ಎನ್.**
ಕಾರ್ಯಕ್ರಮ ನಿರ್ವಾಹಕರು
ಕಲಾ ಶಿಕ್ಷಣ, ಐ.ಎಫ್.ಎ.
ಬೆಂಗಳೂರು



# ಕಲಿ-ಕಲಿಸು ಹರ್ಷದಿ
# ಕಲೆಯ ಮಾಂತ್ರಿಕ ಸ್ಪರ್ಷದಿ...!

ಕಲಿ ಮತ್ತು ಕಲಿಸು ಎಂದರೆ ಕಲಿಯುತ್ತಾ ಕಲಿಸುವುದು, ಕಲಿಸುತ್ತಾ ಕಲಿಯುವುದು. ಕಲಿಯುವವರು ಯಾರು? ಕಲಿಸುವವರು ಯಾರು? ಇಲ್ಲಿ ಶಿಕ್ಷಕರು ಕಲಿಸುತ್ತಾ ತಾವೂ ಕಲಿಯುತ್ತಾ ಸಾಗುತ್ತಾರೆ. ಕಲಿ–ಕಲಿಸು ಕಾರ್ಯಕ್ರಮವು ಕರ್ನಾಟಕದ ಸರ್ಕಾರಿ ಶಾಲೆಗಳನ್ನು ಕೇಂದ್ರವಾಗಿಟ್ಟುಕೊಂಡು ಕಲಾ ಅಂತರ್ಗತ ಕಲಿಕೆಗೆ ಶಿಕ್ಷಕರನ್ನು ಅಣಿಗೊಳಿಸುತ್ತಾ ಅವರೊಳಗೆ ಚರ್ಚೆ ಸಂವಾದ ಏರ್ಪಡಿಸುವ, ಹೊಸ ಹೊಸ ಸಾಧ್ಯತೆಗಳಿಗೆ ತಮ್ಮನ್ನು ತಾವು ತೆರೆದುಕೊಳ್ಳುವಂತೆ ಮಾಡುವ, ಜೊತೆಗೆ ಕಲಿಕೆಯಲ್ಲಿ ಹೊಸತನದ ಹುಡುಕಾಟಕ್ಕೆ ಅವಕಾಶ ಕಲ್ಪಿಸಿದೆ. ಆ ದಾರಿಯಲ್ಲಿ ನಾವು ಜೊತೆಯಾಗಿ ಸಾಗಿದ ಎರಡು ವರ್ಷಗಳ ಹಾದಿಯ ಹೆಜ್ಜೆ ಗುರುತುಗಳನ್ನು ತಿರುಗಿ ನೋಡುವ ಕೆಲಸ ಇದಾಗಿದೆ.

ಈ ದಿಸೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಲಾ ಅಂತರ್ಗತ ಕಲಿಕೆ ಕಾರ್ಯಾಗಾರವನ್ನು ವಿಭಿನ್ನ ಭೌಗೋಳಿಕ ಪರಿಸರಗಳಲ್ಲಿ ನಡೆಸಲಾಯಿತು. ಪ್ರೌಢ ಹಾಗೂ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು, ಸಹಶಿಕ್ಷಕರು, ವೃತ್ತಿ ಶಿಕ್ಷಣ ಶಿಕ್ಷಕರು, ಸಮುದಾಯ ಹಾಗೂ ಎಸ್.ಡಿ.ಎಮ್.ಸಿ. ಸದಸ್ಯರು ಇದರಲ್ಲಿ ಪಾಲ್ಗೊಂಡು ಕಲಿಕೆ ಪರಿಣಾಮಕಾರಿಯಾಗಲು ಕಲೆ ಹೇಗೆ ಸಹಾಯ ಮಾಡಬಹುದು ಎಂಬುದರ ಬಗ್ಗೆ ಚರ್ಚೆ, ವಿಶ್ಲೇಷಣೆ ಸಂವಾದ ನಡೆಸಲಾಯಿತು. ಅದರ ಸಕಾರಾತ್ಮಕ ಸ್ಪಂದನೆಯ ಫಲವಾಗಿ ಕಲಿ–ಕಲಿಸು ಪರಿಕಲ್ಪನೆ ವಿಸ್ತಾರಗೊಳ್ಳುತ್ತಾ ತಾತ್ವಿಕವಾಗಿ ಇನ್ನಷ್ಟು ಗಟ್ಟಿಯಾಗಲು ಸಾಧ್ಯವಾಯಿತು, ಸಹಕಾರಿಯಾಯಿತು.

ಮಗು ಏನು ಕಲಿಯುತ್ತದೆ ಎನ್ನುವುದಕ್ಕಿಂತ ಮಗು ಹೇಗೆ ಕಲಿಯುತ್ತದೆ ಎನ್ನುವುದು ಬಹಳ ಮುಖ್ಯ. ಮಗು ಹುಟ್ಟಿನಿಂದಲೇ ಕಲಿಯುವ ಗುಣ ಹೊಂದಿರುತ್ತದೆ. ಮನೆಯಲ್ಲಿ ಭಿನ್ನ ವಯಸ್ಸಿನ ಹಿರಿಯರ ನಡೆನುಡಿ ಮನೆ ಹಾಗೂ ಸುತ್ತಮುತ್ತಲ ಚಟುವಟಿಕೆಗಳ ವೀಕ್ಷಣೆ, ಆಡುವ ಭಾಷೆ, ಭಾವನೆ ಎಲ್ಲವನ್ನೂ ಕಲಿಸುವ ಗುರುವಿಲ್ಲದೇ, ಯಾವುದೇ ನಿರ್ದಿಷ್ಟ ವಿಧಾನಗಳು, ವೇಳಾಪಟ್ಟಿಗಳೂ ಇಲ್ಲದೇ ಸಾಕಷ್ಟು ಅಂಶಗಳನ್ನು ಮಗು ಕಲಿಯುತ್ತಲೇ ಇರುತ್ತದೆ. ಕಲಿಕೆ ಶಾಲೆಯಲ್ಲಿ ಮಾತ್ರ ಎಂಬುದು ಭ್ರಮೆಯ ಮಾತು. ಶಾಲೆಯಲ್ಲಿ ಪ್ರತೀ ಮಗುವಿನ ಸ್ವಂತಿಕೆಯನ್ನು ಶಿಕ್ಷಕರಾದವರು ಗೌರವಿಸಿದಾಗ ಕಲಿಕೆ ಅರ್ಥಪೂರ್ಣವಾಗಲು ಸಾಧ್ಯ. ಈ ಸೂಕ್ಷ್ಮ ಪ್ರಕ್ರಿಯೆಗೆ ಸಂವೇದನಾಶೀಲ ಶಿಕ್ಷಕರ ಅಗತ್ಯವಿದೆ. ಮಗುವಿನ ಕಲಿವಿನ ಸಾಮರ್ಥ್ಯ ವಿಭಿನ್ನವಾಗಿರುವುದರಿಂದ ಕಲಿಸುವ ಮತ್ತು ಕಲಿಯುವ ಪ್ರಕ್ರಿಯೆಗೆ ನಿರ್ಧರಿತ ವೇಗ ಇರುವುದಿಲ್ಲ. ಇಲ್ಲಿ ಮಗು ಮಾಡುವ ತಪ್ಪುಗಳನ್ನು ಬೆಳವಣಿಗೆಯ ಹೆಜ್ಜೆಗಳೆಂದೇ ಪರಿಗಣಿಸಬೇಕಾಗಿದೆ. ಇಲ್ಲವಾದಲ್ಲಿ ಫಲಿತಗಳು ಋಣಾತ್ಮಕವಾಗಬಹುದು.

ಪ್ರತೀ ಮಕ್ಕಳೂ ಭಿನ್ನ ಸಾಮರ್ಥ್ಯ ಭಿನ್ನ ಕಲಿಕಾ ಶೈಲಿ ಹೊಂದಿರುತ್ತಾರೆ ಆದ್ದರಿಂದ ಅವರ ಜ್ಞಾನ ರಚನೆಯ ಪ್ರಕ್ರಿಯೆಯೂ ಭಿನ್ನವಾಗಿರುವುದು ಸಹಜವೇ ಆಗಿದೆ. ಕೆಲವರಿಗೆ ಕಥೆ ಇಷ್ಟವಾದರೆ ಇನ್ನು ಕೆಲವರಿಗೆ ಕವನ, ಮತ್ತೆ ಕೆಲವರಿಗೆ ನಾಟಕ, ಮತ್ತಷ್ಟು ವಿದ್ಯಾರ್ಥಿಗಳಿಗೆ ವಿಜ್ಞಾನದ ಕೌತುಕಗಳು, ಗಣಿತದ ಗಮ್ಮತ್ತುಗಳು, ಪರಿಸರದ ಅದ್ಭುತಗಳು, ಚಿತ್ರಕಲೆ ಬರವಣಿಗೆ ಪರಿಸರ ಹೀಗೆ ಮುಂದುವರಿಯುತ್ತಲೇ ಹೊಗುತ್ತದೆ. ಒಂದು ತರಗತಿಯಲ್ಲಿ ಸಾಮೂಹಿಕ ಬೋದನೆ ಮಾಡುವಾಗ ಬಹುವಿಧ ಬುದ್ಧಿವಂತಿಕೆಯುಳ್ಳ ಮಕ್ಕಳನ್ನು ಒಳಗೊಳ್ಳುವ ಚಟುವಟಿಕೆಗಳನ್ನು ರೂಪಿಸಬೇಕು. ಅದು ಸತ್ಯವಾಗಿಯೂ ಒಬ್ಬ ಮಾರ್ಗದರ್ಶಿ ಶಿಕ್ಷಕನಿಗೆ ಸವಾಲಿನ ಕೆಲಸ. ಶಿಕ್ಷಕರು ತರಗತಿಯಲ್ಲಿ ನಿರ್ವಹಿಸಬೇಕಾದ ವಿಷಯವನ್ನು ಸಾಂಪ್ರದಾಯಿಕ ಉಪನ್ಯಾಸಕ್ಕಿಂತ ಈ ಕೆಲವು ವಿಧಾನಗಳ ಮೂಲಕ ಪ್ರಯತ್ನಿಸಿದರೆ ಇನ್ನಷ್ಟು ಹೆಚ್ಚು ವಿದ್ಯಾರ್ಥಿಗಳ ಮನಸ್ಸನ್ನು ಆಕರ್ಷಿಸಲು ಸಾಧ್ಯ. ಇಲ್ಲವಾದರೆ ತರಗತಿ ಕೋಣೆ ಬಹುಮುಖೀ ಚಿಂತನೆಗೆ ತೆರೆದುಕೊಳ್ಳದೇ ಒಂದೇ ವಯಸ್ಸಿನ ಮಕ್ಕಳು, ಒಂದೇ ಬಗೆಯಾಗಿ ಆಡುವ ಒಂದೇ ವೇಗದಲ್ಲಿ ಕಲಿಯುವ ಒಂದೇ ರೀತಿಯ ಸಮವಸ್ತ್ರ ಧರಿಸಿ ಒಂದೇ ಗತಿಯಲ್ಲಿ ಹೆಜ್ಜೆಯಿಕ್ಕುವ ರೋಬಾಟ್‌ಗಳಾಗಿಬಿಡುತ್ತಾರೆ. ಅಷ್ಟೇ ಅಲ್ಲದೇ ಸುತ್ತಲಿನ ಪರಿಸರಕ್ಕೆ ಬೆರಗುಗೊಳ್ಳುವುದನ್ನು ಮರೆತೇಬಿಡುತ್ತಾರೆ.

ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು–2005 ಕಲಾ ಶಿಕ್ಷಣಕ್ಕಾಗಿ ಒಂದು ಅಧ್ಯಾಯವನ್ನೇ ಮೀಸಲಿಟ್ಟಿದ್ದಲ್ಲದೆ ಎಲ್ಲಾ ವಿಷಯಗಳ ಸಮನ್ವಯ (Integrated) ಬೋಧನೆಗೆ ಹೆಚ್ಚು ಒತ್ತು ನೀಡಿರುವುದನ್ನು ಇಲ್ಲಿ ಗಮನಿಸಬೇಕಾಗಿದೆ. ಮಕ್ಕಳು ಅನುಭವದಿಂದ, ಹೊಸದನ್ನು ಸೃಷ್ಟಿಸುವ ಮೂಲಕ ಮತ್ತು ತಾವೇ ಮಾಡುವುದರಿಂದ, ಪ್ರಯೋಗಗಳನ್ನು ನಡೆಸುವುದರಿಂದ, ಒದುವುದರಿಂದ, ಚರ್ಚೆಯಿಂದ,

ಪ್ರಶ್ನಿಸುವುದರಿಂದ, ಕೇಳುವುದರಿಂದ, ಚಿಂತನೆ ಮತ್ತು ಪರ್ಯಾಲೋಚನೆಯಿಂದ ವ್ಯಕ್ತಿಗತವಾಗಿ ಮತ್ತು ಇತರರೊಡನೆ ಮಾತಿನಲ್ಲಿ, ಚಲನೆಯಲ್ಲಿ ಇಲ್ಲವೆ ಬರವಣಿಗೆಯಲ್ಲಿ ತನ್ನನ್ನು ತಾನು ಅಭಿವ್ಯಕ್ತಿಸುವುದು ಇವೇ ಮೊದಲಾದ ವಿಧಾನಗಳಿಂದ ಕಲಿಯುತ್ತಾರೆ.

ಬ್ರೂನರ್‌ನ ರಚನಾವಾದದ ಪ್ರಕಾರ ವಿದ್ಯಾರ್ಥಿಗಳು ಜ್ಞಾನ ಕಟ್ಟಿಕೊಳ್ಳುವ ಹಾಗೂ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಪ್ರಕ್ರಿಯೆಗೆ ಕಲೆಯ ಮೂಲಕ ಶಿಕ್ಷಣ ವಿಧಾನ ತುಂಬಾ ಪ್ರಸ್ತುತವೆಂದೆನಿಸುತ್ತದೆ. ಬಹುವಿಧ ಬುದ್ಧಿವಂತಿಕೆಗೆ ಅನುಗುಣವಾಗಿ ವಿದ್ಯಾರ್ಥಿಗಳಲ್ಲಿ ತರಗತಿ ಕೋಣೆಯಲ್ಲಿನ ಏಕತಾನತೆ ಹೋಗಲಾಡಿಸಲು ಎಲ್ಲಾ ವಿದ್ಯಾರ್ಥಿಗಳಿಗೂ ಅವಕಾಶ ಕಲ್ಪಿಸುವಲ್ಲಿ ಕಲಾ ಪ್ರಕಾರಗಳಾದ ಸಂಗೀತ, ನೃತ್ಯ, ಪ್ರದರ್ಶನ ಕಲೆಗಳಾದ ರಂಗಭೂಮಿ ಬಳಕೆ ಪರಿಹಾರ ಮಾರ್ಗವಾದೀತು. ವಿದ್ಯಾರ್ಥಿಗಳು ಸೃಜನಶೀಲವಾಗಿ ಭಾಗವಹಿಸಿ ತಮ್ಮದೇ ಆದ ರೀತಿಯಲ್ಲಿ ಜ್ಞಾನ ಕಟ್ಟಿಕೊಳ್ಳಲು ಸಹಕಾರಿಯಾದೀತು ಎಂಬುದು ನಮ್ಮ ನಂಬಿಕೆ.

ಇಲ್ಲಿ ಐಎಫ್‌ಎ ಸಂಸ್ಥೆಯಿಂದ ಸಹಾಯಧನ ಪಡೆದ ಶಿಕ್ಷಕರು ಹಾಗೂ ಕಲಾವಿದರು ತಮ್ಮದೇ ನಿಪುಣತೆಯ ಕ್ಷೇತ್ರದ ಮೂಲಕ ತರಗತಿ ಕೋಣೆಯ ಕಲಿಕೆಯಲ್ಲಿ ವಿಭಿನ್ನತೆ ತರಲು ಪ್ರಯತ್ನ ನಡೆಸಿದ್ದಾರೆ. ಹಲವಾರು ಮಿತಿಗಳ ನಡುವೆಯೂ ಕಲಿಕೆ ಪರಿಣಾಮಕಾರಿಯಾಗಲು ಹೀಗೊಂದು ದಾರಿಯಿದೆ ಎಂಬ ಕೈಕಂಬ ತೋರಿ ಹೊಸಬರಿಗೆ ದಿಕ್ಸೂಚಿಗಳಾಗಿದ್ದಾರೆ. ನಮಗೆ ಫಲಿತಾಂಶಕ್ಕಿಂತ ಸಾಧ್ಯತೆಗಳ ಹುಡುಕಾಟ ಮುಖ್ಯವಾಗಿತ್ತು. ಉದಾಹರಿಸುವುದಾದರೆ ಸರಕಾರಿ ಪ್ರೌಢಶಾಲೆ ಕೋಣಿ, ಕುಂದಾಪುರ ಇಲ್ಲಿ ನಾನು 8 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ನಿರ್ವಹಿಸಿದ "ಕಾವ್ಯರಂಗ" ಯೋಜನೆಯು ತರಗತಿಯ ಭಾಷಾ ಪಠ್ಯಗಳು ಅದರಲ್ಲಿಯೂ ಮುಖ್ಯವಾಗಿ ಕವನಗಳು ಕೇವಲ ಬಾಯಿಪಾಠ ಹಾಗೂ ಪ್ರಶ್ನೋತ್ತರಗಳಿಗೆ ಸೀಮಿತವಾಗದೇ ಕವನದ ನಿಜವಾದ ಉದ್ದೇಶಗಳಾದ ರಸಸ್ವಾದನೆ ಹಾಗೂ ಕವನದ ಆಶಯಗಳ ಕಡೆ ವಿದ್ಯಾರ್ಥಿಗಳ ಗಮನ ಕೇಂದ್ರೀಕರಿಸುವುದಾಗಿತ್ತು. ಉಪನ್ಯಾಸ, ವಾಚನ, ಗಾಯನ, ನೃತ್ಯ, ಕವನಗಳ ದೃಶ್ಯರೂಪಕ, ಪರಿಣಾಮಕಾರಿ ಓದು ಇವೆಲ್ಲವೂ ಕಲೆಯ ಮೂಲಕವೇ ಆಗಿದ್ದರೂ ವಿದ್ಯಾರ್ಥಿಗಳ ವಿಭಿನ್ನ ನೆಲೆಗಳ ಆಸಕ್ತಿಯಿಂದಾಗಿ ಕ್ರೀಯಾಶೀಲವಾಗಿ ಭಾಗವಹಿಸಿದ ವಿದ್ಯಾರ್ಥಿಗಳಲ್ಲಿ ಮಾತ್ರ ನಾವು ಉದ್ದೇಶಿತ ಗುರಿ ಈಡೇರುವಲ್ಲಿ ಸಫಲರಾದೆವು. ಉಳಿದಂತೆ ಅದನ್ನು ಅನುಭವಿಸಿದವರಿಗೆ ಮತ್ತು ವೀಕ್ಷಿಸಿದವರಿಗೆ ಹೀಗೊಂದು ಸಾಧ್ಯತೆಗಳ ಅನಾವರಣ ಸಾಧ್ಯವಾಯಿತು.

ಇಂಡಿಯಾ ಫೌಂಡೇಶನ ಫಾರ್ ದಿ ಆರ್ಟ್ಸ್ ಸಂಸ್ಥೆಯವರು ತಮ್ಮ ಕಲಿಕಲಿಸು ಕಾರ್ಯಕ್ರಮದ ಮೂಲಕ ಇಂತಹ ಶಿಕ್ಷಕರಿಗೆ ತರಬೇತಿ ನೀಡಿ ಪ್ರೋತ್ಸಾಹಿಸಿ ಆರ್ಥಿಕ ಅನುದಾನದ ಸೌಲಭ್ಯವನ್ನು ಒದಗಿಸುತ್ತಿರುವುದು ಶ್ಲಾಘನೀಯ ಸಂಗತಿ. ಐಎಫ್‌ಎ

ಸಂಸ್ಥೆಯ ಕಲಿಕಲಿಸು ವಿಭಾಗದ ಹೆಜ್ಜೆಗಳ ಗುರುತುಗಳನ್ನು ಪರಿಚಯಿಸುವ ಒಂದು ಅಪೂರ್ವ ಅವಕಾಶ ದೊರೆತಿರುವುದು ಇನ್ನೊಂದು ವಿಭಿನ್ನ ನೆಲೆಯ ಅಧ್ಯಯನಕ್ಕೆ ನಮಗೆ ಸಾಧ್ಯವಾಯಿತು. ಈ ಎಲ್ಲ ಶಿಕ್ಷಕರ ಹಾಗೂ ಕಲಾವಿದರ ಕಲಾ ಯೋಜನೆಗಳ ಅಧ್ಯಯನ ನಮಗೆ ನಿಜಕ್ಕೂ ಒಂದು ಅಪೂರ್ವ ಅನುಭವ. ಅವರ ಆಲೋಚನೆಗಳು, ಚಿಂತನೆಗಳು, ವಿಶ್ಲೇಷಣೆಗಳು ಮುಖ್ಯವಾಗಿ ಸೃಜನಶೀಲ ಅಭಿವ್ಯಕ್ತಿಗಳು ಹಾಗೂ ಅದರಿಂದ ಬಂದ ಫಲಿತಾಂಶಗಳು ನಮ್ಮ ಅನುಭವವನ್ನು ಮತ್ತಷ್ಟು ವಿಸ್ತರಿಸಲು ಸಹಕಾರಿಯಾಯಿತು. ಇಂತಹ ಅವಕಾಶ ನೀಡಿದ ಐಎಫ್‌ಎ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕರಾದ ಅರುಂಧತಿ ಘೋಷ್, ಕಾರ್ಯಕ್ರಮ ಸಂಯೋಜಕರಾದ ಕೃಷ್ಣಮೂರ್ತಿಯವರಿಗೆ ಹಾಗೂ ಸಹಕರಿಸಿದ ಐಎಫ್‌ಎ ಸಂಸ್ಥೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ ನಾವು ಕೃತಜ್ಞರು.




ಸದಾನಂದ ಬೈಂದೂರರ ಕಾವ್ಯರಂಗ ಪ್ರಯೋಗದ ಒಂದು ನೋಟ



**ಸದಾನಂದ ಬೈಂದೂರು**
ಕ್ಷೇತ್ರ ಸಮನ್ವಯಾಧಿಕಾರಿ (ಪ್ರಭಾರ)
ಕ್ಷೇತ್ರ ಸಂಪನ್ಮೂಲ ಕೇಂದ್ರ
ಕುಂದಾಪುರ ಉಡುಪಿ



**ಎಸ್. ಕಲಾಧರ**
ಶಿಕ್ಷಕರು, ಸ.ಹಿ.ಪ್ರಾ.ಶಾಲೆ,
ಕನ್ನಮಂಗಲ, ಶಿಡ್ಲಘಟ್ಟ ತಾ.
ಚಿಕ್ಕಬಳ್ಳಾಪುರ ಜಿಲ್ಲೆ






ಎಸ್. ಕಲಾಧರರ ಸಂಪಾದಕತ್ವದಲ್ಲಿ ಹೊರಬಂದ ಶಾಮಂತಿ



ತಾವು ರಚಿಸಿದ ಚಿತ್ರಗಳನ್ನು ಹೆಮ್ಮೆಯಿಂದ ಪ್ರದರ್ಶಿಸುತ್ತಿರುವ ಮಣಿಪಾಲದ ಮರಿ ಕಲಾವಿದರು.

# ಸಂಸ್ಕೃತಿಗಳ ನಡುವೆ ಸೇತುವೆ

ಕಲಾವಿದರ ಯೋಜನೆ

ಬಡತನದಲ್ಲಿ ಬೆಂದು ಸಾಕಾಗಿ ನಾಲ್ಕು ಕಾಸು ಹೆಚ್ಚಿಗೆ ಸಿಗುವ ಕೆಲಸಗಳನ್ನು ಹುಡುಕಿಕೊಂಡು ಮಕ್ಕಳು ಮರಿಗಳೊಂದಿಗೆ ಪಾತ್ರೆ ಪಗಡಗಳೊಂದಿಗೆ ವಲಸೆ ಹೊರಟುಬಿಡುವ ಉತ್ತರ ಕರ್ನಾಟಕದ ಶ್ರಮಜೀವಿಗಳನ್ನು ನಾವೆಲ್ಲಾ ನೋಡಿರುತ್ತೇವೆ.



**ಉನ್ನಿಕೃಷ್ಣನ್**
ಸಹಾಯಕ ಪ್ರಾಧ್ಯಾಪಕರು,
ಮಣಿಪಾಲ ವಿಶ್ವವಿದ್ಯಾಲಯ
9880168485
Unni4art@gmail.com




ಸಂಪನ್ಮೂಲ ವ್ಯಕ್ತಿಗಳ ಮಾತುಗಳನ್ನು ಕುತೂಹಲದಿಂದ ಪುಟಾಣಿಗಳು ಕೇಳುತ್ತಿದ್ದಾರೆ



ಅವರ ಛಲ, ಶ್ರಮ, ದೈಹಿಕ ದಾರ್ಢ್ಯತೆಗಳೇ ಅಲ್ಲದೇ ಅವರಲ್ಲಿ ವಿಶಿಷ್ಟ ಭಾಷಾಸೊಗಡು, ಕತೆಗಳು, ಜನಪದ ಮುಂತಾದ ದೇಸಿ ವೈಶಿಷ್ಟತೆಗಳನ್ನೂ ನಾವು ನೋಡಬಹುದು. ಈ ಕುತೂಹಲದ ದೃಷ್ಟಿಯೊಂದಿಗೆ ಉನ್ನಿಕೃಷ್ಣನ್‌ರವರು ಮಣಿಪಾಲದ ಸರ್ಕಾರಿ ಶಾಲೆಯಲ್ಲಿ ಒಂದು ಕಲಾ ಯೋಜನೆಯಲ್ಲಿ ನಿರತರಾಗಿದ್ದಾರೆ.

ಈ ಶಾಲೆಯ ಬಹುತೇಕ ಮಕ್ಕಳು ಉತ್ತರ ಕರ್ನಾಟಕದ ವಲಸೆ ಮಕ್ಕಳಾಗಿದ್ದು ಭಿನ್ನ ಸಂಸ್ಕೃತಿಗಳ ಹಾಗೂ ಭಿನ್ನ ಭಾಷೆಗಳ ಸಂಗಮ ಇಲ್ಲಿದೆ. ಈ ಭಾಷೆಗಳ ಹಾಗೂ ಸಂಸ್ಕೃತಿಗಳ ನಡುವೆ ಕಲಾ ಸೇತುವೆಯೊಂದನ್ನು ಕಟ್ಟುವ ಪ್ರಯತ್ನ ಉನ್ನಿಕೃಷ್ಣನ್‌ರವರದು. ಇದಷ್ಟೇ ಅಲ್ಲದೇ ಪರಿಸರ ಕಳಕಳಿಯನ್ನು ತಮ್ಮ ಚಟವಟಿಕೆಗಳ ಮೂಲಕ ಮಕ್ಕಳಲ್ಲಿ ಬಿತ್ತುತ್ತಿದ್ದಾರೆ.

ಹಲವು ಕಲಾವಿದರು, ಛಾಯಾಗ್ರಾಹಕರು, ಪರಿಸರವಾದಿಗಳು, ಸಂಪನ್ಮೂಲವ್ಯಕ್ತಿಗಳು ಉನ್ನಿಕೃಷ್ಣನ್‌ರವರ ಯೋಜನೆಯಲ್ಲಿ ಸಹಕರಿಸಿದ್ದಾರೆ.







ಶಾಲಾ ಕೈತೋಟದ ನಿರ್ವಹಣೆಯಲ್ಲಿ
ವಿಜಯನಗರ ಶಾಲಾಮಕ್ಕಳು



# ಕೃಷಿಯೂ... ಕಲೆಯೂ...



ತೆಂಗಿನಗರಿಗಳಲ್ಲಿ ಕಲಾತ್ಮಕ
ಚಿತ್ತಾರ ಹೆಣೆಯುತ್ತಿರುವ
ಬಾಲೆಯರು.

ಕಲಾವಿದರ ಯೋಜನೆ



**ಅಪರ್ಣಾ ಎಸ್. ದೇಶಪಾಂಡೆ**
ರೈತ ಕಲಾವಿದೆ ಹಾಗೂ
ಕಲಾಶಿಕ್ಷಕಿ, ಬೆಳಗಾವಿ
7353207287
sabdeshaparna@gmail.com

ಕಲೆಯು ಕೂಡ ಒಂದು ಕೃಷಿ ಹಾಗೂ ಕೃಷಿಯು ಕೂಡ ಒಂದು ಕಲೆ. ಕಲೆ ಹಾಗೂ ಕೃಷಿಯ ತೆಕ್ಕೆಗೆ ಆಕಸ್ಮಿಕವಾಗಿ ಬಿದ್ದ ಅಪರ್ಣಾ ಎಸ್. ದೇಶಪಾಂಡೆ ಕಂಡುಕೊಂಡ ಸತ್ಯವಿದು. ಇವೆರಡರ ನಡುವೆ ಇರುವ ಅಂತರ್ಗತ ಸಂಬಂಧವನ್ನು ಗ್ರಹಿಸಿರುವ ಇವರು ಇದನ್ನು ಸಮಾಜಕ್ಕೂ ಹಂಚಬೇಕೆಂಬ ಹಂಬಲ ಇಟ್ಟುಕೊಂಡಿದ್ದಾರೆ. ಸಮಾಜದ ಮುಖ್ಯ ಘಟಕವಾದ ಶಾಲೆ ಎಂಬ ಸಂಸ್ಥೆಯಲ್ಲಿ ಕಲೆ ಹಾಗೂ ಕೃಷಿ ಕೇಂದ್ರಿತ ಚಟವಟಿಕೆಗಳು ಮಕ್ಕಳ ಜ್ಞಾನ ಹಾಗೂ ಸೃಜನಶೀಲತೆಗಳನ್ನು ಉದ್ದೀಪಿಸುತ್ತವೆ.

ಬೆಳಗಾವಿಯ ವಿಜಯನಗರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 'ಕೃಷಿ-ಕಲೆ' ಯ ಸಾಧ್ಯತೆಗಳನ್ನು ಅಪರ್ಣಾ ಅನ್ವೇಷಿಸುತ್ತಿದ್ದಾರೆ. ಶಾಲೆಯ ಆವರಣದಲ್ಲಿ ಪುಟ್ಟ ಕೈ ತೋಟದ ಸ್ಥಾಪನೆ ಹಾಗೂ ನಿರ್ವಹಣೆ, ಕೃಷಿ ಕ್ಯಾಲೆಂಡರ್‌ನ ರಚನೆ, ಸ್ಥಳೀಯ ರೈತರೊಂದಿಗೆ ಸಂವಾದ, ಮಕ್ಕಳ ಸಂತೆಯ ಆಯೋಜನೆ, ಸ್ಥಳೀಯ ಕೃಷಿ ಪದ್ಧತಿಯ ಪದಸಂಪತ್ತಿನ ಸಂಗ್ರಹಣೆ ಮುಂತಾದ ಕೆಲಸಗಳನ್ನು ಮಕ್ಕಳೊಂದಿಗೆ ಮಾಡುತ್ತಿದ್ದಾರೆ. ಕೃಷಿ ಕ್ಯಾಲೆಂಡರ್‌ನ ರಚನೆಗಾಗಿ 'ಮಿನಿಯೇಚರ್ ಪೇಂಟಿಂಗ್' ಪ್ರಕಾರವನ್ನು ಬಳಸಲಿದ್ದಾರೆ.









ಕೃಷಿಸಂಬಂಧೀ ಚಟವಟಿಕೆಗಳಲ್ಲಿ ನಿರತ ಪುಟಾಣಿಗಳು



# ಹಹಹಹ ರುದ್ರಾ... ಹಹಹಹ ದೇವಾ

ಕರ್ನಾಟಕದ ಜನಪದ ಭಿತ್ತಿಯಲ್ಲಿ ವೀರಗಾಸೆ ಪ್ರಕಾರಕ್ಕೆ ಒಂದು ಶ್ರೀಮಂತ ಇತಿಹಾಸವಿದೆ. ಈ ಅನುಪಮ ನೃತ್ಯಕ್ಕೆ ಬಾಲ್ಯದಲ್ಲೇ ಮನಸೋತು ಕಲಿತು ಕಲಾವಿದರಾಗಿ ಆ ಮೂಲಕ ಇನ್ನಷ್ಟು ಕಲಾವಿದರನ್ನು ರೂಪಿಸಬೇಕೆಂಬ ಹಂಬಲವುಳ್ಳವರು ಅರುಣ ಬಿ.ಟಿ. ಗೊಪ್ಪೇನಹಳ್ಳಿ.

ಇವರು ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಗೊಪ್ಪೇನಹಳ್ಳಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಪಾಠಶಾಲೆಯ ಸಹಯೋಗದೊಂದಿಗೆ ಕಲಾಯೋಜನೆಯನ್ನು ನಿರೂಪಿಸಿದ್ದಾರೆ. ಅಲ್ಲಿನ ಮಕ್ಕಳಿಗೆ ವೀರಗಾಸೆಯ ಸಾಂಪ್ರದಾಯಿಕ ಪರಿಚಯದ ಜೊತೆಗೆ



ಕಲಾವಿದರ ಯೋಜನೆ





**ಅರುಣ ಬಿ.ಟಿ. ಗೊಪ್ಪೇನಹಳ್ಳಿ**
ರಂಗ ನಿರ್ದೇಶಕರು
9481986116
arunabtgpl@gmail.com




ಒಗಟುಗಳ ಪರಿಚಯ ಮಾಡಿಕೊಡುವ ಗುಂಪು ಚಟುವಟಿಕೆಯಲ್ಲಿ ಮಕ್ಕಳು.

ಶಿಕ್ಷಣ ಇಲಾಖೆಯ ಪಠ್ಯಪುಸ್ತಕಗಳ ಆಯ್ದ ಅಧ್ಯಾಯಗಳನ್ನು ವೀರಗಾಸೆ ಪ್ರಕಾರಕ್ಕೆ ಅಳವಡಿಸುವ ಪ್ರಯೋಗವನ್ನು ಮಾಡುತ್ತಿದ್ದಾರೆ. ಹಾಗೆ ರೂಪಿಸಿದ ಕಿರು ನೃತ್ಯರೂಪಕಗಳನ್ನು ಹಲವು ಶಾಲೆಗಳಲ್ಲಿ ಪ್ರದರ್ಶಿಸುವ ಹಂಬಲ ಇಟ್ಟುಕೊಂಡಿದ್ದಾರೆ. ಇದರೊಂದಿಗೆ ಜನಪದ ಕಲಾಪ್ರಕಾರದ ಅನುಭವಕ್ಕೆ ಮಕ್ಕಳು ತೆರೆದುಕೊಳ್ಳುವುದರೊಂದಿಗೆ ಅವರ ಪಠ್ಯಜ್ಞಾನ ಹಾಗೂ ಸೃಜನಶೀಲತೆಗಳು ಹೊಸ ಆಯಾಮವನ್ನು ಕಂಡುಕೊಳ್ಳುತ್ತವೆ ಎಂಬುದು ಅರುಣರವರ ನಂಬಿಕೆ.









# ರಿಪೇರಿ ಎಂಬ ಧ್ಯಾನದಲ್ಲಿ...

ಅನುಪಯುಕ್ತ ವಸ್ತುಗಳನ್ನು ಸಂಪನ್ಮೂಲವಾಗಿ ಕಾಣುವ ಮನೋಭಾವವನ್ನು ಸಮುದಾಯದಲ್ಲಿ ಮುಖ್ಯವಾಗಿ ಮಕ್ಕಳ ಮನಸ್ಸಿನಲ್ಲಿ ಹುಟ್ಟು ಹಾಕುವುದೇ ರಿಪೇರ್, ರಿಯೂಸ್ ಆಂಡ್ ರಿಸೈಕಲ್ ನ ದೃಷ್ಟಿ. ಅನುಪಯುಕ್ತ ವಸ್ತುಗಳ ವಿಲೇವಾರಿ ನಮ್ಮ ದೇಶದ ಬಹು ದೊಡ್ಡ ಸಮಸ್ಯೆ. ಸಮುದಾಯದ ಭಾಗವಹಿಸುವಿಕೆಯಿಂದ ಮಾತ್ರ ಈ ಸಮಸ್ಯೆಗೆ ಪರಿಹಾರ ಸಾಧ್ಯ ಎನ್ನುವುದು ಪೂರ್ಣ ಸರ್ಕಾರ್ ಅವರ ನಂಬಿಕೆ.



ಕಲಾವಿದರ ಯೋಜನೆ

**ಪೂರ್ಣ ಸರ್ಕಾರ್**
ಕಲಾವಿದರು,
ಬೆಂಗಳೂರು
9739686665
repaircafe.bengaluru@gmail.com

ಆ ಕಾರಣವಾಗಿ ಬೆಂಗಳೂರಿನ ಜೀವನ ಭೀಮಾ ನಗರದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳೊಂದಿಗೆ ಅವರ ಒಡನಾಟದ ಮೂಲಕ ಅವರಿಗೆ ಇಂತಹ ಪ್ರಸಕ್ತ ಸಮಸ್ಯೆಗಳಿಗೆ ತಮ್ಮನ್ನು ತೆರೆದುಕೊಳ್ಳುವಂತೆ ಮಾಡಲು ವಿದ್ಯಾರ್ಥಿಗಳಿಗೆ ವಸ್ತುಗಳು ಏಕೆ ಅನುಪಯುಕ್ತವಾಗುತ್ತವೆ ಮತ್ತು ಅವುಗಳ ಮರುಬಳಕೆ ಹೇಗೆ ಸಾಧ್ಯ ಎನ್ನುವುದರ ಕುರಿತು ಮಾರ್ಕೆಟ್‌ಗಳಿಗೆ ಕರೆದುಕೊಂಡು ಹೋಗಿ ಅಲ್ಲಿನ ವ್ಯಾಪಾರಸ್ಥರೊಂದಿಗೆ ಹಾಗೂ ಜನರೊಂದಿಗೆ ಸಂವಾದ, ಚರ್ಚೆ ವೀಕ್ಷಣೆಯ ಮೂಲಕ ಪ್ರಾಯೋಗಿಕ ಅನುಭವ ನೀಡಲು ಪ್ರಯತ್ನಿಸುತ್ತಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳ ಸೃಜನಶೀಲತೆಗೆ ಅವಕಾಶ ಮಾಡಿಕೊಡುತ್ತಾ ಅನುಪಯುಕ್ತ ವಸ್ತುಗಳನ್ನು ನೋಡುವ ಕ್ರಮವನ್ನೇ ಬದಲಾಯಿಸುವುದು. ಇವರ ಉದ್ದೇಶವಾಗಿದೆ. ತನ್ಮೂಲಕ ಸಮುದಾಯದಲ್ಲಿ ನವೀನ ಚಿಂತನೆಯ ಬೇರನ್ನು ಗಟ್ಟಿಗೊಳಿಸುವ ಪ್ರಯತ್ನ ಇದಾಗಿದೆ.



ನಿತ್ಯಜೀವನದಲ್ಲಿ ವ್ಯರ್ಥವೆಂದು ಬಿಸಾಕುವ ತ್ಯಾಜ್ಯವಸ್ತುಗಳನ್ನು
ಉಪಯುಕ್ತ ವಸ್ತುಗಳಾಗಿ ಪರಿವರ್ತಿಸುವ ಜೀವನಭೀಮಾನಗರದ ಮಕ್ಕಳು









ಸಂಖ್ಯೆಗಳೊಂದಿಗೆ ಆಟ
ಆಟದೊಂದಿಗೆ ಕಲಿಕೆ!





ತಮ್ಮ ಕ್ರಿಯಾಶೀಲ ಸೃಷ್ಟಿಗಳನ್ನು ಆನಂದದಿಂದ ಪ್ರದರ್ಶಿಸುತ್ತಿರುವ ಮಕ್ಕಳು.





# ಪರಿಸರ ಮತ್ತು ಇವಳ ಮಕ್ಕಳು













ಪೇಪರ್ ಕ್ರಾಫ್ಟ್‌ನಲ್ಲಿ ತಲ್ಲೀನರಾಗಿರುವ ಮುರಳ್ಳಿಯ ಪುಟಾಣಿಗಳು

ಕಲಾವಿದರ ಯೋಜನೆ




**ಚನ್ನಕೇಶವ ಕಾಫಿ**
ದೃಶ್ಯ ಕಲಾವಿದರು
9913735996
ckoffee@gmail.com




ಮುರಳ್ಳಿ ಎಂಬ ಪುಟ್ಟ ಹಳ್ಳಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಅಂಚಿನಲ್ಲಿದೆ. ಮರಾಠಿ ಮಾತನಾಡುವ ಆದಿವಾಸಿ ಕುಣಬಿ ಜನಾಂಗದವರು ಇರುವ ಈ ಹಳ್ಳಿಗೆ ಸರಿಯಾದ ರಸ್ತೆ ಸಂಪರ್ಕವೂ ಇಲ್ಲ. ಇಂತಹ ಈ ಹಳ್ಳಿಯಲ್ಲಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯೊಂದಿಗೆ ಚನ್ನಕೇಶವ ಕಾಫಿ ಒಂದು ಕುತೂಹಲಕರ ಕಲಾ ಅನ್ವೇಷಣೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಮಕ್ಕಳಲ್ಲಿ ಈಗಾಗಲೇ ಇರುವ ಕಲಾ ಪ್ರಜ್ಞೆಯನ್ನು ಹಾಗೂ ಪರಿಸರ ಪ್ರಜ್ಞೆಯನ್ನು ಜಾಗೃತಗೊಳಿಸುವ ಕೆಲಸವನ್ನು ಚನ್ನಕೇಶವ ಕಾಫಿ ಮಾಡುತ್ತಿದ್ದಾರೆ. ಈ ಯೋಜನೆ 'ಪರಿಸರ ಮತ್ತು ಇವಳ ಮಕ್ಕಳು' ಎಂಬ ಸುಂದರ ಹೆಸರಿನೊಂದಿಗೆ ಚಾಲನೆಯಾಗಿದೆ. ಇದರ ಭಾಗವಾಗಿ ಸ್ಥಳೀಯ ಕಲೆಗಳ ಪರಿಚಯ, ಸ್ಥಳೀಯ ಸಾಮುದಾಯಿಕ ಕತೆಗಳ ಪರಿಚಯ, ವಿಶೇಷ ಗಿಡ ಬೇರುಗಳ ಔಷಧಿ ಪರಿಚಯ, ಗೋಡೆ ಚಿತ್ತಾರ, ಅಂಟಿಕೆ-ಪಿಂಟಿಕೆ ಸಂಪ್ರದಾಯ ಹಾಗೂ ಕಿರುಪ್ರವಾಸ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಮುರಳ್ಳಿ ಶಾಲೆಯೊಂದಿಗೆ ಪಕ್ಕದ ಇಕ್ಕೆಬೀಳು, ಮರಾಠಿ ಹಾಗೂ ಹೊಲಗಾರು ಶಾಲೆಗಳು ಕೂಡ ಈ ಯೋಜನೆಯ ವ್ಯಾಪ್ತಿಯಲ್ಲಿ ಬರುತ್ತವೆ.





# ಓದಿ ಓದಿ ಮರುಳಾದ ಮಕ್ಕಳು




ಓದುವಿಕೆ ಎಂಬುದು ಭಾಷಾಕೌಶಲಗಳಲ್ಲಿ ಪ್ರಮುಖವಾದದ್ದು. ಆದರೆ ಸಾಮಾನ್ಯವಾಗಿ ಮಕ್ಕಳ ಓದು ಪಠ್ಯಪುಸ್ತಕಗಳಾಚೆಗೆ ವಿಸ್ತರಿಸುವುದು ಬಹಳ ಕಡಿಮೆ. ಶ್ರೀಮಂತ ಸಾಹಿತ್ಯ ಪರಂಪರೆ ಮಕ್ಕಳ ಕೈಗೆಟುಕದೇ ಉಳಿದುಬಿಡುವುದೇ ಹೆಚ್ಚು. ಈ ಅಂತರವನ್ನು ಕಲಾಮಾಧ್ಯಮಗಳ ಮುಖಾಂತರ ಹೇಗೆ ನಿವಾರಿಸುವುದು ಎಂಬ ಪ್ರಯೋಗ ನಡೆಸುತ್ತಿದ್ದಾರೆ ಕಲಾವಿದೆ ಅನುರಾಧ ಎಚ್.ಆರ್. ಬೆಂಗಳೂರಿನ ಜಯನಗರ ಒಂಭತ್ತನೇ ಬ್ಲಾಕಿನ ಸರ್ಕಾರಿ ಪ್ರೌಢಶಾಲೆ ಇವರ ಕಲಾಯೋಜನೆಯ ರಂಗಸ್ಥಳವಾಗಿದೆ. ಆ ಶಾಲೆಯ ಮಕ್ಕಳಿಗೆ ಆಂಗ್ಲ ಹಾಗೂ ಕನ್ನಡ ಭಾಷೆಯ ಆಯ್ದ ಪಠ್ಯಗಳನ್ನು ಇಟ್ಟುಕೊಂಡು ಓದಿನ ಬೇರೆ ಬೇರೆ ಆಯಾಮಗಳನ್ನು ಪರಿಚಯಿಸಲಾಗುತ್ತಿದೆ. ಓದುವ ರೀತಿಗಳು, ಗ್ರಹಿಕೆಯ ಆಯಾಮಗಳು, ದೃಷ್ಟಿಕೋನ, ಸೃಜನಶೀಲ ಅನುವಾದ, ಪ್ರಶ್ನಿಸುವುದು ಮುಂತಾದ ಓದುವ ಪರಿಕಲ್ಪನೆಗಳನ್ನು ಮಕ್ಕಳೊಂದಿಗೆ, ಶಿಕ್ಷಕರೊಂದಿಗೆ ಹಾಗೂ ಪಾಲಕರೊಂದಿಗೆ ಹಂಚಿಕೊಳ್ಳುವ ಪ್ರಯತ್ನವನ್ನು ಅನುರಾಧರವರು ಮಾಡುತ್ತಿದ್ದಾರೆ. ಇದಕ್ಕಾಗಿ ಸಾಹಿತ್ಯ, ನಾಟಕ, ನೃತ್ಯ, ಅಭಿನಯ, ಚಿತ್ರಕಲೆ, ಕಥನ ಕೌಶಲ ಮುಂತಾದ ತಂತ್ರಗಳನ್ನು ಬಳಸುತ್ತಿದ್ದಾರೆ.

ಕಲಾವಿದರ ಯೋಜನೆ



**ಅನುರಾಧ ಎಚ್.ಆರ್.**
ರಂಗಕಲಾವಿದೆ, ಬೆಂಗಳೂರು
9845425437
anuhr@untitledarts.org





ಓದಿನ ವಿಸ್ಮಯಕ್ಕೆ ಮಾರುಹೋದ ಬಾಲೆ

# ನಮ್ಮ ಪದ ಜನಪದ



ಜನಪದ ಎಂಬುದು ಒಂದು ನಾಡಿನ ಉಸಿರು. ಈ ಉಸಿರನ್ನು ಮರೆತರೆ ನಾಡಿನ ಅಸ್ತಿತ್ವಕ್ಕೆ ಬೆಲೆ ಇಲ್ಲ. ಬಸವಲಿಂಗಯ್ಯ ಎಸ್.ಹಿರೇಮಠರಂತಹ ಕಲಾವಿದರು ಜನಪದವಿನ್ನೂ ಉಸಿರಾಡುತ್ತಾ ಇರಲು ಶ್ರಮಿಸುತ್ತಿದ್ದಾರೆ. ಉತ್ತರ ಕರ್ನಾಟಕದ ಶ್ರೀಮಂತ ಮೌಖಿಕ ಜನಪದ ಪ್ರಕಾರಗಳ ಉಳಿವಿಗಾಗಿ ಮೂರು ದಶಕಗಳಿಂದಲೂ ಕೆಲಸಮಾಡುತ್ತಿರುವ ಬಸವಲಿಂಗಯ್ಯರವರು ಜನಪದದ ಉಳಿವು ಮಕ್ಕಳ ಮೂಲಕವೇ ಎಂದು ನಂಬಿದ್ದಾರೆ.

ಇವರು ಧಾರವಾಡ ಜಿಲ್ಲೆಯ ಸಪ್ತಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಜನಪದದ ಸೊಗಡನ್ನು ಪರಿಚಯಿಸುವ ವಿಶಿಷ್ಟ ಯೋಜನೆಯನ್ನು ಹಮ್ಮಿಕೊಂಡಿದ್ದಾರೆ. ವಾರಾಂತ್ಯದ ತರಗತಿಗಳಲ್ಲಿ ಮಕ್ಕಳಿಗೆ ಸೋಬಾನೆ ಪದ, ಗೀಗಿಪದ, ತತ್ವಪದ ಮುಂತಾದ ಉತ್ತರ ಕರ್ನಾಟಕದ ಜನಪದ ಕಲಾಪ್ರಕಾರಗಳನ್ನು ಪರಿಚಯಿಸುತ್ತಿದ್ದಾರೆ. ಶಾಲಾ ಪಠ್ಯಕ್ರಮದ ಪಾಠಗಳನ್ನು ರಂಗಕ್ಕೆ ಅನ್ವಯಿಸಿ ಸಣ್ಣ ನಾಟಕಗಳನ್ನು ಕೂಡ ಕಲಿಸುತ್ತಿದ್ದಾರೆ. ಇದೇ ಅಲ್ಲದೇ ಧಾರವಾಡ ಭಾಗದ ವಿಶಿಷ್ಟ ಸಾಂಪ್ರದಾಯಿಕ ಹಾಡುಗಳನ್ನು ಮಕ್ಕಳ ಮುಖಾಂತರ ಸಂಗ್ರಹಿಸಿ ಪ್ರಕಟಿಸುವ ಉಮೇದು ಇಟ್ಟುಕೊಂಡಿದ್ದಾರೆ.

ಕಲಾವಿದರ ಯೋಜನೆ



**ಬಸವಲಿಂಗಯ್ಯ ಎಸ್. ಹಿರೇಮಠ**
ಕಲಾವಿದರು ಹಾಗೂ ಅಧ್ಯಕ್ಷರು,
ಜನಪದ ಸಂಶೋಧನಾ ಕೇಂದ್ರ
ಸತ್ತಾಪುರ, ಧಾರವಾಡ
8762332429
basaveesha@gmail.com



ಮಕ್ಕಳೊಂದಿಗೆ ಜನಪದ ಸಂವಾದ

# ಗೌಳಿಗ ಸಮುದಾಯದೊಂದಿಗೆ ನಾಲ್ಕುಹೆಜ್ಜೆ

ದನ ಸಾಕುತ್ತಾ ಕಾಡು ಮೇಡು ಅಲೆಯುತ್ತಾ ಸಾಗುವ ಮುಗ್ಧ ಗೌಳಿಗರದು ಪ್ರಾಮಾಣಿಕ ಜೀವನ. ಇವರು ನೆಲೆ ನಿಂತ ತಾಣವೇ ಉತ್ತರ ಕನ್ನಡ ಜಿಲ್ಲೆಯ ಗೌಳಿವಾಡ. ಮರಾಠಿ ಮಿಶ್ರಿತವಾದ ಇವರ ಭಾಷೆ, ಹಾಡು, ಕುಣಿತವೆಲ್ಲವೂ ವೈವಿಧ್ಯಮಯ. ಇಲ್ಲಿಯ ಮಕ್ಕಳಿಗೆ ಪಾಠ ಹೇಳುವ ನಾಗರಾಜರಿಗೆ ಗೌಳಿಗರ ಸಂಸ್ಕೃತಿ ಬಗ್ಗೆ ಕುತೂಹಲ. ಇವರ ಭಾಷೆ, ಹಾಡು, ಕುಣಿತವನ್ನು ಪಠ್ಯಗಳಲ್ಲಿ ಬಳಸಿದರೆ ಹೇಗೆ ಎಂಬ ಯೋಚನೆಯೇ ಈ ಯೋಜನೆ

ಶಾಲೆಯ ಕನ್ನಡ ಪಠ್ಯದ ಪದ್ಯಭಾಗವನ್ನು ಮರಾಠಿ ಮಿಶ್ರಿತ ಗೌಳಿಗರ ಭಾಷೆಗೆ ಅನುವಾದ ಮಾಡಿ ಬೋಧನೆಗೆ ತೊಡಗುವ ಸಾಹಸವನ್ನು ಇಲ್ಲಿ ಮಾಡಿದ್ದಾರೆ. ಆ ಪಠ್ಯವನ್ನು ಗೌಳಿಗರ ಜನಪದ ನೃತ್ಯಕ್ಕೆ ಅಳವಡಿಸಿ ಇನ್ನಷ್ಟು ಆಪ್ತವಾಗಿಸಿದ್ದಾರೆ. ಇದಕ್ಕೆ ಸಹಕಾರಿಯಾಗುವಂತೆ ಮರಾಠಿ-ಕನ್ನಡ-ಇಂಗ್ಲೀಷ್ ತ್ರಿಭಾಷಾ ಪದಕೋಶದ ತಯಾರಿಯಲ್ಲೂ ನಿರತರಾಗಿದ್ದಾರೆ. ಈ ತ್ರಿಭಾಷಾ ಪದಕೋಶವು ಗೌಳಿಗರ ಸಣ್ಣ ಸಮುದಾಯದ ಭಾಷೆಯೊಂದನ್ನು ಉಳಿಸಿಕೊಳ್ಳುವಲ್ಲಿ ಚಿಕ್ಕ ಪ್ರಯತ್ನವಾಗಬಹುದು ಎಂಬುದು ನಾಗರಾಜ ಅವರ ಸಹಜ ನಿರೀಕ್ಷೆ.

ಗೌಳಿಗರಲ್ಲಿ ಗಜ್ಜ, ಪುಗಡಿ, ರಗ್ಮಾಲ್ ಮುಂತಾದ ವಿವಿಧ ನೃತ್ಯ ಪ್ರಕಾರಗಳಿದ್ದು, ಅದಕ್ಕೆ ತಕ್ಕಂತೆ ವಿಶಿಷ್ಟ ವೇಷಭೂಷಣಗಳು ನಮ್ಮ ಗಮನ ಸೆಳೆಯುತ್ತವೆ. ಅವರ ಭಾಷೆ, ನೃತ್ಯ, ವೇಷಭೂಷಣಗಳು ವೈವಿಧ್ಯಮಯವಾಗಿದ್ದು ಅವುಗಳನ್ನು ಅವು ಇದ್ದಂತಯೇ ನೋಡುವುದು, ಗೌರವಿಸುವುದು ಹಾಗೂ ಕಲಿಕೆಯ ಪ್ರಕ್ರಿಯೆಯ ಭಾಗವಾಗಬೇಕು ಎಂಬುದೇ ಶಿಕ್ಷಕ ನಾಗರಾಜರ ಅಪೇಕ್ಷೆ.




**ನಾಗರಾಜ ಎಂ ಹುಡೇದ**
ಶಿಕ್ಷಕರು
ಸ.ಕಿ.ಪ್ರಾ.ಶಾಲೆ ಬೈಲಂದೂರು,
ಯಲ್ಲಾಪುರ ತಾಲೂಕು
9902109534
nagaraj.krntk@gmail.com


ಶಿಕ್ಷಕರ ಯೋಜನೆ



ಗೌಳಿಗರ ನೃತ್ಯಪ್ರಕಾರದ ಅಭ್ಯಾಸದಲ್ಲಿ ವಿದ್ಯಾರ್ಥಿಗಳು



ಗೊಂಬೆಯಾಟದ ತಾಲೀಮಿನಲ್ಲಿ ಸಿದ್ದಪ್ಪನವರ ವಿದ್ಯಾರ್ಥಿಗಳು

# ಗೊಂಬೆ ಹೇಳುತ್ತೈತೆ ಮತ್ತೆ ಹೇಳುತ್ತೈತೆ.....

ಶಿಕ್ಷಕರ ಯೋಜನೆ




**ಸಿದ್ದಪ್ಪ ಬಿರಾದಾರ**
ವಿಜ್ಞಾನ ಶಿಕ್ಷಕರು
ಸರಕಾರಿ ಪ್ರೌಢಶಾಲೆ ಬಿಬ್ಬಲಗೇರಿ
ಹಳಿಯಾಳ ತಾಲೂಕು,
ಉತ್ತರ ಕನ್ನಡ ಜಿಲ್ಲೆ
9480268131
bv.siddu77@ gmail.com






ವಿವಿಧ ಗೊಂಬೆಗಳ ಭಂಡಾರ


ಬಿರಾದಾರರಿಗೆ ಗೊಂಬೆಗಳೊಂದಿಗೆ ಭಾವನಾತ್ಮಕ ಸಂಬಂಧ ತಮ್ಮ ಶಾಲೆಯಲ್ಲಿ ಮುನ್ನೂರಕ್ಕೂ ಹೆಚ್ಚು ಗೊಂಬೆಗಳು ಇವೆಯೆಂದು ಹೆಮ್ಮೆ ಪಡುವ ಇವರಿಗೆ ತಮ್ಮ ವಿಜ್ಞಾನ ವಿಷಯದ ಎಲ್ಲ ಪಾಠಗಳಿಗೂ ಗೊಂಬೆಗಳನ್ನು ಬಳಸುವ ತವಕ.

ಗೊಂಬೆಗಳಲ್ಲಿ ಕೈಗೊಂಬೆ, ಕಡ್ಡಿಗೊಂಬೆ, ನೆರಳಗೊಂಬೆ, ಕೀಲುಗೊಂಬೆ, ಸೂತ್ರದ ಗೊಂಬೆ ಹಾಗೂ ಮುಖವಾಡ ಗೊಂಬೆ ಹೀಗೆ ವಿವಿಧ ಪ್ರಕಾರಗಳನ್ನು ಅವರು ಗುರುತಿಸುತ್ತಾರೆ. ಶಾಲೆಯ ಎಲ್ಲ ಮಕ್ಕಳೂ ಈ ಗೊಂಬೆಗಳ ತಯಾರಿಕೆಯಲ್ಲಿ ಪಾಲ್ಗೊಂಡು ಖುಷಿ ಪಡುವುದರ ಜೊತೆಗೆ ಅವುಗಳನ್ನು ರಂಗದ ಮೇಲೆ ಆಡಿಸುತ್ತಾರೆ, ಕುಣಿಸುತ್ತಾರೆ, ಹಾಡು ಹೇಳುತ್ತಾರೆ ಹಾಗೂ ಪ್ರದರ್ಶನ ನೀಡುತ್ತಾರೆ ಒಟ್ಟಿನಲ್ಲಿ ಖುಷಿ ಪಡುತ್ತಾರೆ. ಪಠ್ಯದ ಎಲ್ಲ ವಿಷಯಗಳನ್ನು ಗೊಂಬೆಗಳ ಮೂಲಕ ಬೋಧಿಸಲು ಸಾಧ್ಯ ಎನ್ನುವ ಸಿದ್ದಪ್ಪ ಬಿರಾದಾರರು ಹೊಸ ಹೊಸ ಪ್ರಯೋಗಗಳಲ್ಲಿ ನಿರತರಾಗಿದ್ದಾರೆ.












ಶಾಸನಗಳ ಪರಿಚಯ

# ಇತಿಹಾಸದ ಹಾದಿಯಲ್ಲಿ



ಪ್ರತೀ ಮಗುವೂ ಭಿನ್ನ ಎಂದು ತಿಳಿಯುವ ಬಾಳಪ್ಪ ಈರಪ್ಪ ಚಿನಗುಡಿಯವರು ತನ್ನ ವಿದ್ಯಾರ್ಥಿಗಳು ಎಲ್ಲವನ್ನೂ ನೋಡಿ, ಮಾಡಿ, ಮುಟ್ಟಿ, ಕೇಳಿ ಹಾಗೇ ಅನುಭವಿಸಿ ಕಲಿಯಬೇಕೆಂಬ ನಿರೀಕ್ಷೆ ಅವರದು. ಇವರು ಪಠ್ಯಕ್ಕೆ ಪೂರಕವಾಗಿ ನಾಣ್ಯಗಳ ಅಧ್ಯಯನ ಹಾಗು ವಸ್ತು ಸಂಗ್ರಹಾಲಯಗಳ ವೀಕ್ಷಣೆಯ ಮೂಲಕ ಕಲಿಕೆಗೆ ವಾಸ್ತವದ ನೆಲೆಗಟ್ಟನ್ನು ನೀಡಲು ಇಲ್ಲಿ ಪ್ರಯತ್ನಿಸಬೇಕೆಂದುಕೊಂಡಿದ್ದಾರೆ. ನಾಣ್ಯಗಳು ಅದರ ಆಕಾರ, ಕಾಲ, ದೇಶ, ಮೌಲ್ಯಗಳು ಮಾತ್ರವಲ್ಲದೇ ಅವುಗಳ ಕಲಾತ್ಮಕತೆಯು ಕೂಡಾ ನಮ್ಮ ಗಮನ ಸೆಳೆಯುತ್ತದೆ. ವಸ್ತು ಸಂಗ್ರಹಾಲಯಗಳ ವೀಕ್ಷಣೆ ಮೂಲಕ ವಿದ್ಯಾರ್ಥಿಗಳಲ್ಲಿ ವಸ್ತುಗಳ ವೈಜ್ಞಾನಿಕ ನಿರ್ವಹಣಾ ಕೌಶಲ ಬೆಳೆಯಬಹುದೆಂಬ ನಂಬಿಕೆ ಅವರದು.

ನಾಣ್ಯಗಳ ಸಂಗ್ರಹ ಹಾಗೂ ಪ್ರದರ್ಶನಗಳ ಮೂಲಕ ತನ್ನ ವಿದ್ಯಾರ್ಥಿಗಳು ಐತಿಹಾಸಿಕ ವಸ್ತುಗಳ ಕುರಿತಾದ ಗೌರವ ಭಾವ ಅವರಲ್ಲಿ ಮೂಡಬೇಕೆಂಬುದು ಅವರ ಅಪೇಕ್ಷೆ.

ಶಿಕ್ಷಕರ ಯೋಜನೆ



**ಬಾಳಪ್ಪ ಈರಪ್ಪ ಚಿನಗುಡಿ,**
ಶಿಕ್ಷಕರು, ಸ.ಹಿ.ಕ.ಪ್ರಾ.ಶಾಲೆ
ಸಂಗೇಶಕೊಪ್ಪ,
ಸವದತ್ತಿ ಬೆಳಗಾವಿ.
9481761930
bchinagudi@gmail.com



ಸಂಪನ್ಮೂಲವ್ಯಕ್ತಿಗಳಿಂದ ಮಕ್ಕಳಿಗೆ ಪ್ರಾತಕ್ಷಿಕೆ

# ನಲಿಕಲಿಯ ನಂತರ.....



ರಾಜ್ಯ ಪಠ್ಯಕ್ರಮದಲ್ಲಿ ಒಂದರಿಂದ ಮೂರನೆಯ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ನಲಿಕಲಿ ಚಟುವಟಿಕೆ ಆಧಾರಿತ ಕಲಿಕಾ ವಿಧಾನ ಹಾಗೂ ಐದರಿಂದ ಏಳನೇ ತರಗತಿಯ ವಿದ್ಯಾರ್ಥಿಗಳಿಗೆ ಚೈತನ್ಯ ಮಾದರಿಯ ಬೋಧನೆ ಜಾರಿಯಲ್ಲಿದೆ. ನಾಲ್ಕನೇ ತರಗತಿ ಬೋಧನೆಯ ಕುರಿತು ಸ್ಪಷ್ಟ ವಿಧಾನಗಳನ್ನು ಇದುವರೆಗೂ ಎಲ್ಲೂ ಉಲ್ಲೇಖಿಸಿಲ್ಲ. ಆದ್ದರಿಂದ ನಾಲ್ಕನೇ ತರಗತಿ ಒಂದು ಪ್ರತ್ಯೇಕ ತರಗತಿಯಾಗಿ ನಲಿಕಲಿ ಮತ್ತು ಚೈತನ್ಯ ವಿಧಾನಗಳನ್ನು ಬೆಸೆಯುವ ಕೇಂದ್ರವಾಗಿ ನೀಡಿರುವ ಪಠ್ಯಕ್ರಮವನ್ನು ಆಧರಿಸಿ ಅಗತ್ಯವಿರುವ ಕಲಿಕಾ ಚಟುವಟಿಕೆಗಳ ಮಾದರಿಯನ್ನು ಪುನರ್ ನಿರೂಪಿಸುವ ಪ್ರಯತ್ನ ಸತ್ಯನಾರಾಯಣ ಇವರದಾಗಿದೆ.

ಈ ವಿನೂತನ ಕಲಿಕಾ ಚಟುವಟಿಕೆಗಳನ್ನು ರಚಿಸುವಾಗ ಸ್ಥಳಿಯ ಸಂಪನ್ಮೂಲಗಳನ್ನು ಬಳಸುತ್ತಾ ಪಠ್ಯಕ್ರಮದ ಸ್ಥಳೀಕರಣಗೊಳಿಸುವ ಆಸಕ್ತಿ ಇವರದು. ಪಠ್ಯಕ್ಕೆ ಪೂರಕವಾದ ಸ್ಥಳೀಯ ಕಲಾ ಪ್ರಕಾರಗಳಾದ ಬತ್ತ ಕುಟ್ಟುವ ಹಾಡು, ಮೀನುಗಾರರ ಹಾಡು, ಶೋಬಾನೆ ಹಾಡು, ಯಕ್ಷಗಾನ, ಗೊಂಬೆಯಾಟ, ಧಿಮ್ ಸಾಲ್, ಹೌಂದಾರಾಯನ ವಾಲ್ಗ, ಕೋಲಾಟ, ಹೋಳಿ ನೃತ್ಯ ಇತ್ಯಾದಿಗಳ ಬಳಕೆಯ ಮೂಲಕ ತರಗತಿಯ ಕಲಿಕಾ ಪ್ರಕ್ರಿಯೆಗಳಲ್ಲಿ ಶಿಕ್ಷಕರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಅದರ ಪ್ರಯೋಗ ಶಾಲೆಯಾಗಿ ತಮ್ಮ ಶಾಲೆಯ ವಿದ್ಯಾರ್ಥಿಗಳನ್ನು ಬಳಸಿಕೊಳ್ಳುತ್ತ ಅವರಲ್ಲಿ ಹೊಸ ಬದಲಾವಣೆಯ ನಿರೀಕ್ಷೆಯಲ್ಲಿದ್ದಾರೆ.





**ಸತ್ಯನಾರಾಯಣ**
ಮುಖ್ಯಶಿಕ್ಷಕರು,
ಸ.ಹಿ.ಪ್ರಾ.ಶಾಲೆ, ಮರವಂತೆ
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
9901410026
sathyanakoderi@gmail.com

ಮಕ್ಕಳಿಗೆ ನೃತ್ಯ ನಟನೆ ಎಂದರೆ ಬಹಳ ಅಚ್ಚುಮೆಚ್ಚು!



ಹಾಡಿನ ಜೊತೆಗೆ ಅಭಿನಯವನ್ನು ಮಾಡುತ್ತಾ ಚಟುವಟಿಕೆಯಲ್ಲಿ ಮಕ್ಕಳು ತಲ್ಲೀನರಾಗಿದ್ದಾರೆ.

# ಪಠ್ಯ ಕಾವ್ಯ ಸಂಯೋಜನೆ

ಲಯಬದ್ಧವಾದ ಹಾಡಿನ ಮೋಡಿಗೆ ಮನಸೋಲದವರು ಯಾರಿದ್ದಾರೆ... ಚಪ್ಪರಮನಿಯವರು ತನ್ನ ವಿದ್ಯಾರ್ಥಿಗಳಿಗೆ ಪಾಠಗಳು ಸುಲಭವಾಗಿ ಅರ್ಥವಾಗಬೇಕು. ಕಲಿಕೆ ಪರಿಣಾಮಕಾರಿಯಾಗಬೇಕು ಎಂಬ ನೆಲೆಯಲ್ಲಿ ಪಠ್ಯದ ಪಾಠಗಳನ್ನು ಹಾಡಾಗಿ ರಚಿಸಿ ಅದನ್ನು ರಾಗ ಸಂಯೋಜನೆಗೆ ಒಳಪಡಿಸಲು ಇಲ್ಲಿ ಪ್ರಯತ್ನಿಸಿದ್ದಾರೆ. ಭಾಷೆ, ವಿಜ್ಞಾನ, ಗಣಿತ ವಿಷಯದ ಪಠ್ಯಗಳನ್ನು ಇದಕ್ಕಾಗಿ ಆಯ್ಕೆ



ಶಿಕ್ಷಕರ ಯೋಜನೆ

**ಜೆ ಎಂ ಚಪ್ಪರಮನಿ**
ಶಿಕ್ಷಕರು, ಸ.ಹಿ.ಪ್ರಾ.ಶಾಲೆ
ಬೀರಶೆಟ್ಟಹಳ್ಳಿ
ಪಾಂಡವಪುರ ತಾಲ್ಲೂಕು
ಮಂಡ್ಯ ಜಿಲ್ಲೆ
7259898332
jmcppura@gmail.com









ಜಯರವರಿಂದ ಮಕ್ಕಳಿಗೆ ಪಠ್ಯಾಧಾರಿತ ಗೀತೆಗಳ ತಾಲೀಮು.

ಮಾಡಿಕೊಂಡಿದ್ದು ಸರಳತೆಯ ಕಲಿಕೆಯೇ ಇಲ್ಲಿಯ ಸಾರ. ವಿವಿಧ ವಿಷಯಗಳ ಸಂಯೋಜನೆ ಈ ಕಲಿಕಾ ಪ್ರಕ್ರಿಯೆಯ ಸೂತ್ರವಾಗಿದೆ. ಜೆ ಎಂ ಚಪ್ಪರಮನಿಯವರು ವಿವಿಧ ವಿಷಯಗಳಲ್ಲಿ ತರಬೇತಿ ಪಡೆದು ಸಂಪನ್ಮೂಲ ವ್ಯಕ್ತಿಯಾಗಿಯೂ ಗುರುತಿಸಿಕೊಂಡವರು. ತಮ್ಮ ಶೈಕ್ಷಣಿಕ ಸಾಧನೆಗಾಗಿ ಜಿಲ್ಲಾ ಉತ್ತಮ ಶಿಕ್ಷಕಿ ಪ್ರಶಸ್ತಿಯನ್ನೂ ತಮ್ಮದಾಗಿಸಿಕೊಂಡಿದ್ದಾರೆ. ವಿಸ್ತಾರ ಅನುಭವ ಇರುವ ಇವರ ಯೋಜನೆಯ ಕುರಿತು ಕುತೂಹಲ ಜೊತೆಗೆ ಸಾಕಷ್ಟು ನಿರೀಕ್ಷೆಯೂ ಇದೆ.





ಹಾಡುಗಳನ್ನು ಕಲಿಯುವ ಆಸಕ್ತ ಮಕ್ಕಳು






# ಹರಾ ಹರಾ..... ಮಹಾದೇವದೇವಾ...

**ಡಾ.** ಸತೀಶ ಕೆ.ಸಿ. ಯವರು ಮಲೆನಾಡಿನವರು. ಮಲೆನಾಡಿನ ಒಂದು ಮೌಖಿಕ ಜಾನಪದ ಕಲಾಪ್ರಕಾರವಾದ ಪುರವಂತಿಕೆಯನ್ನು ತಮ್ಮ ವಿದ್ಯಾರ್ಥಿಗಳ ಕಲಿಕಾ ಪ್ರಕ್ರಿಯೆಯಲ್ಲಿ ಸಮೀಕರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇಂದು ಪುರವಂತಿಕೆಯ ಮೂಲ ಸ್ವರೂಪವನ್ನು ಮದುವೆ, ವೀರಭದ್ರ ದೇವರ ಜಾತ್ರೆ, ಗೃಹಪ್ರವೇಶ ಮುಂತಾದ ಸಂದರ್ಭಗಳಲ್ಲಿ ಕಾಣಬಹುದು. ಇದರಲ್ಲಿ ವೀರಭದ್ರ ದೇವರ ವಡಪುಗಳು, ಪೌರಾಣಿಕ ಕಥೆಗಳ ರೂಪದಲ್ಲಿ ಹೇಳಲಾಗುತ್ತದೆ. ವಡಪುಗಳು ಕೇವಲ ಶಬ್ದಗಳ ಜಾಲವಾಗಿರದೇ ವಿಶಿಷ್ಟವಾದ ನುಡಿಗಟ್ಟುಗಳ ಕ್ರಮಬದ್ಧ ಜೋಡಣೆಯ ಜೊತೆಗೆ ಅದನ್ನು ಪ್ರಸ್ತುತ ಪಡಿಸುವ ಲಯ ಹಾಗೂ ಹಿಮ್ಮೇಳಗಳ ಅಪೂರ್ವ ಸಮ್ಮಿಲನವಾಗಿರುತ್ತದೆ.

ಇತ್ತೀಚೆಗಿನ ಕಲಾವಿದರು ಗಾಂಧೀ, ಅಂಬೇಡ್ಕರ್, ವಿವೇಕಾನಂದ ಮುಂತಾದವರ ಜೀವನ ಚರಿತ್ರೆಯನ್ನು ಕೂಡಾ ಇದೇ ವಡಪಿನ ಮಾದರಿಯಲ್ಲಿ ಹೇಳುತ್ತಿದ್ದಾರೆ.
ಸತೀಶ ಅವರು ಒಬ್ಬ ರಂಗ ಕಲಾವಿದರಾಗಿ ಕೇವಲ ದೇವರಕಥೆಗಳನ್ನು ಮಾತ್ರ ಹೇಳಲು ಈ ಪ್ರಕಾರವನ್ನು ಬಳಸದೇ ಬದುಕಿನ ಪಾಠ ಹೇಳುವ ವಡಪುಗಳನ್ನು ಕೇಂದ್ರೀಕರಿಸಿ ವಿದ್ಯಾರ್ಥಿಗಳ ನಡುವೆ ಸಂವಾದ ಏರ್ಪಡಿಸಲು ಆಶಿಸಿದ್ದಾರೆ. ಇಂದಿನ ವಿದ್ಯಾರ್ಥಿಗಳಿಗೂ ಮೌಖಿಕ ಕಥನ ಸಾಹಿತ್ಯದ ರಚನೆಯ ಅನುಭವ ಆಗಬೇಕಾಗಿದೆ. ಜೊತೆಗೆ ಆ ಕಲಾ ಪ್ರಕಾರದ ನೃತ್ಯ ಶೈಲಿ ಹಾಗೂ ವಾದ್ಯಗಳ ನುಡಿಸುವಿಕೆಯ ತರಬೇತಿಗಳನ್ನು ಸಹ ಆಯೋಜಿಸಿದ್ದಾರೆ.



ಶಿಕ್ಷಕರ ಯೋಜನೆ

**ಡಾ. ಸತೀಶ್ ಕೆ.ಸಿ.**
ಕನ್ನಡ ಉಪನ್ಯಾಸಕರು,
ಸರ್ಕಾರಿ ಪದವಿ ಪೂರ್ವ ಕಾಲೇಜು,
ಮಾಳೂರು, ತೀರ್ಥಹಳ್ಳಿ (ತಾ),
ಶಿವಮೊಗ್ಗ ಜಿಲ್ಲೆ.
9844367071
sasvehallisatish@gmail.com

ಕಲಿ–ಕಲಿಸು ಕಲಾ ಅಂತರ್ಗತ ಪ್ರಯಾಣದಲ್ಲಿ ನಾವು ಸಾಗಿಸ ದಾರಿಯನ್ನೊಮ್ಮೆ ಎತ್ತರದಲ್ಲಿ ನಿಂತು ಹಿಂದೆ ತಿರುಗಿ ನೋಡುವ ಪ್ರಯತ್ನ ನಮ್ಮದು. ಹಲವು ತೊಡಕುಗಳ ನಡುವೆಯೂ ನಮಗೆ ನಮ್ಮ ಹೆಜ್ಜೆಯ ಮೇಲೆ ನಂಬಿಕೆಯಿದೆ, ಹೆಮ್ಮೆಯಿದೆ. ಇಲ್ಲಿ ಪ್ರಸ್ತಾಪಿಸಿದ ಎಲ್ಲಾ ಯೋಜನೆಗಳು ತನ್ನದೇ ಆದ ಅನನ್ಯತೆ ಹೊಂದಿದೆ. ಈ ಯೋಜನೆಯಿಂದ ಶೈಕ್ಷಣಿಕವಾಗಿ ಮಾತ್ರವಲ್ಲದೇ ಸಾಮುದಾಯಿಕವಾಗಿಯೂ ಗಮನ ಸೆಳೆದಿರುವುದು ನಮ್ಮ ಯಶಸಿಗೆ ಹೆಮ್ಮೆಯ ಗರಿಯಾಗಿದೆ. ಅಂಥಹ ಮೂರು ಯಶೋಗಾಥೆಗಳು ಇಲ್ಲಿವೆ. ಎಲ್ಲವೂ ಮಗುವಿನ ಭಾವವಲಯದೊಳಗೆ ಪ್ರವೇಶಿಸಲು ಉತ್ತಮ ಸಾಧ್ಯತೆಗಳಾಗಿವೆ.

# ಕಥೆ ಹೇಳುವೆ ಕೇಳಿ...

ಕಥೆ ಕೇಳುವುದು ಸುಲಭ ಮತ್ತು ಖುಷಿ. ಆದರೆ ಕಥೆ ಹೇಳುವುದು, ಅದೂ ರಸವತ್ತಾಗಿ, ಕಥೆಯ ಪಾತ್ರಗಳು ಕಣ್ಣಿಗೆ ಕಟ್ಟುವಂತೆ ಹೇಳುವುದು ಸುಲಭದ ಮಾತಲ್ಲ. ಸುಬ್ಬುಲಕ್ಷ್ಮಿಯವರು ತಮ್ಮ ಈ ಯೋಜನೆಯಲ್ಲಿ ವಿದ್ಯಾರ್ಥಿಗಳಿಂದ ಕಥೆ ಹೇಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳ ಸ್ವರಚಿತ ಕಥೆಗಳ ಪ್ರಸ್ತುತಿ ಇಲ್ಲಿ ಮುಖ್ಯವಾಗಿದ್ದರೂ, ಇಲ್ಲಿ ಸೃಜನಶೀಲತೆ, ಭಾಷಾ ಸಂಪತ್ತಿನ ಪರಿಚಯ, ವಾಕ್ ಚತುರತೆ, ಭಾಷಾಶುದ್ಧತೆ, ಕಥೆಯಲ್ಲಿ ತಲ್ಲೀನತೆ ಅದರ ಭಾವ, ವೇಗ, ಏರಿಳಿತಗಳ ಸಂಯೋಜನೆ ಮುಂತಾದ ಅಂಶಗಳ ಉದ್ದೀಪನ ಅಷ್ಟೇ ಮುಖ್ಯವೆನಿಸಿದೆ.

ಇದಕ್ಕೆ ಪೂರ್ವ ತಯಾರಿಯಾಗಿ ವಿದ್ಯಾರ್ಥಿಗಳಿಂದ ಅವರಿಗಿಷ್ಟವಾದ ಕಥೆಗಳ ಸಂಗ್ರಹ ಹಾಗೂ ಅವುಗಳನ್ನು ಓದುವ ಮೂಲಕ ಕಥಾಹಂದರವನ್ನು ಅರಿಯುವುದು ಮತ್ತು ಕಥೆಗಳಲ್ಲಿ ಬರುವ ಪಾತ್ರಗಳ ಭಾವ ಸೂಕ್ಷ್ಮತೆ ಹಿಡಿಯುವ ಪ್ರಯತ್ನದಲ್ಲಿ ವಿದ್ಯಾರ್ಥಿಗಳು ಸಂಪೂರ್ಣ ಹಿಡಿತ ಸಾಧಿಸಬೇಕೆನ್ನುವುದು ಅವರ ನಿರೀಕ್ಷೆ.



ಸುಬ್ಬಲಕ್ಷ್ಮಿ
ಸಹಶಿಕ್ಷಕರು, ಸಹಿಪ್ರಾಶಾಲೆ,
ತೊಣಚಿಕೊಪ್ಪ
ಮೈಸೂರು
9980046785



# ಒಂಚೂರು ಆಟ... ಒಂಚೂರು ಗಣಿತ... ಒಂಚೂರು ಭಾಷೆ...

ಗಣಿತದ ಪರಿಕಲ್ಪನೆಗಳನ್ನು ನಿಜ ಜೀವನದ ಅನುಭವಗಳ ಮೂಲಕ ಒಡೆದು ಕಟ್ಟುವ ಹಾಗೂ ಇದರೊಂದಿಗೆ ಭಾಷಾ ಪರಿಕಲ್ಪನೆಗಳನ್ನು ಅಂತರ್ಗತಗೊಳಿಸುವ ವಿಭಿನ್ನ ಪ್ರಯತ್ನ ರಾಜೀವಗೌಡರದು. ವಿದ್ಯಾರ್ಥಿಗಳ ಸಹಜ ಆಡುಮಾತುಗಳು, ಕತೆಗಳು, ಹಾಡುಗಳು, ಒಗಟುಗಳು, ಗಣಿತದ ಗಮ್ಮತ್ತುಗಳು, ಜಾನಪದ ನುಡಿಗಟ್ಟುಗಳು, ಪದಬಂಧಗಳು, ಸಂಖ್ಯಾ ಬಂಧಗಳು ಇತ್ಯಾದಿಗಳ ಮೂಲಕ ಭಾಷೆ ಮತ್ತು ಗಣಿತ ಎರಡೂ ವಿಷಯಗಳು ಪರಸ್ಪರ ಪೂರಕವಾಗಿ, ಏಕತಾನತೆಗೆ ಅವಕಾಶ ನೀಡದೇ ಹೇಗೆ ಸಹಕಾರಿಯಾಗಬಲ್ಲದೆಂದು ಇವರು ಇಲ್ಲಿ ಪ್ರಯೋಗಕ್ಕೆ ಒಳಪಡಿಸಿದ್ದಾರೆ. ಇವರ ಸಂಯೋಜಿತ ಪುಸ್ತಿಕೆ ಬಾಷೆಯನ್ನು ಗಣಿತದ ಜೊತೆ ಅಂತರ್ಗತಗೊಳಿಸಿ ಮಾಡಿದ ಪ್ರಯೋಗದ ಫಲಶೃತಿಯಾಗಿದೆ. ಸಂಯೋಜಿತೆಯಲ್ಲಿ ಇರುವ ಚಟುವಟಿಕೆಗಳೆಲ್ಲವೂ ಸರಳವಾಗಿದ್ದು ವಿದ್ಯಾರ್ಥಿಗಳಿಗೆ ಕುತೂಹಲದ ಜೊತೆಗೆ ಖುಷಿಯನ್ನೂ ನೀಡಬಲ್ಲವುಗಳಾಗಿವೆ. ತಮ್ಮ ಶಾಲೆಯ 4ರಿಂದ 7ನೇ ತರಗತಿವರೆಗಿನ ಎಲ್ಲ ವಿದ್ಯಾರ್ಥಿಗಳಿಗೂ ಈ ಪುಸ್ತಿಕೆಯನ್ನು ಉಚಿತವಾಗಿ ನೀಡಲಾಗಿದೆ.

ಕಥೆಗಳ ಸಂಯೋಜನೆ ಹಾಗೂ ಸೂಕ್ತ ರೇಖಾ ಚಿತ್ರಗಳಿಗಾಗಿ ಸಂಪನ್ಮೂಲ ವ್ಯಕ್ತಿಗಳ ಸಹಕಾರ ಪಡೆದಿರುತ್ತಾರೆ. ಇದಕ್ಕೆ ಅವರ ಸಹೋದ್ಯೋಗಿಗಳ ಕೊಡುಗೆಯೇನೂ ಕಡಿಮೆಯಿಲ್ಲ. ಭಾಷಾ ಪ್ರೌಢಿಮೆ ಜೊತೆಗೆ ತರ್ಕಬದ್ಧ ಆಲೋಚನಾ ಸಾಮರ್ಥ್ಯಗಳ ನಡುವೆ ಸಂಬಂಧ ಏರ್ಪಡಿಸುವುದೇ ಈ ಯೋಜನೆಯ ಮೂಲಸತ್ವ.





ಗಣಿತದ ಕಲಿಕೆಯನ್ನು ಪ್ರಾಯೋಗಿಕವಾಗಿ ಸಾಧ್ಯವಾಗಿಸುತ್ತಿದೆ ಈ ಶಾಲೆ










ಭಾಷೆ ಹಾಗೂ ಗಣಿತವನ್ನು ಸಂಯೊಜಿಸಿ ಕಲಿಸಬಹುದಾದ ಚಟುವಟಿಕೆಗಳ ಸಂಗ್ರಹವೇ ಈ ‘ಸಂಯೋಜಿತೆ’ ಪುಸ್ತಕ.



**ಎಂ ಜೆ ರಾಜೀವ ಗೌಡ**
ಶಿಕ್ಷಕರು, ಕು.ಶ.ಮಾ.ಹಿ.ಪ್ರಾ.ಶಾಲೆ,
ಚೀಮಂಗಲ
ಶಿಡ್ಲಘಟ್ಟ ತಾಲೂಕು
ಚಿಕ್ಕಬಳ್ಳಾಪುರ
9945408359
mjrajeev.gowda@gmail.com

# ಬಲಲಲಲಲಲ ಬಲ್ಲೈ ಎಲ್ಲೈ ಸಾರಥಿ.....



ವೈವಿಧ್ಯಮಯ ವೇಷಭೂಷಣಗಳಲ್ಲಿ ಕಂಗೊಳಿಸುತ್ತಿದೆ ಮಕ್ಕಳ ಪ್ರತಿಭೆ.



ಅಶೋಕ ತೊಟ್ನಳ್ಳಿ ಕೇವಲ ಶಾಲೆಯ ನಾಟಕ ಮಾಸ್ತರರಾಗಿ ಮಾತ್ರವಲ್ಲದೇ ಜಾಕನಪಲ್ಲಿಯ ಸಮುದಾಯದ ಭಾಗವೇ ಆಗಿಬಿಟ್ಟಿದ್ದಾರೆ. ಊರಿನ ಜನರೆಲ್ಲರನ್ನೂ ಒಗ್ಗೂಡಿಸಿ ನಿಯಮಿತವಾಗಿ ಉಪನ್ಯಾಸ, ಚರ್ಚೆ ಹಾಗೂ ಸಂವಾದಗಳನ್ನು ಏರ್ಪಡಿಸಿ ಶ್ರೀಮಂತ ಜಾನಪದ ಕಲಾಪ್ರಕಾರವೊಂದನ್ನು ಉಳಿಸಿ ಬೆಳೆಸುವುದರ ಜೊತೆಗೆ ಊರಿನಲ್ಲಿ ಶೈಕ್ಷಣಿಕ ಅರಿವಿನ ವಾತಾವರಣ ನಿರ್ಮಾಣ ಮಾಡಿದ್ದಾರೆ. ಬಹುಬೇಗನೆ ಮರೆಯಾಗಬಹುದಾಗಿದ್ದ ಗ್ರಾಮೀಣ ಜಾನಪದ ಪ್ರಕಾರವಾದ ದೊಡ್ಡಾಟವನ್ನು ತನ್ನ ವಿದ್ಯಾರ್ಥಿಗಳಿಗೆ ಪರಿಚಯಿಸುವುದು. ಮತ್ತು ಆ ಸಮುದಾಯದವರಿಂದಲೇ ಅದರ ಪುನರ್ ಸಂಘಟನೆ ಅಶೋಕರ ಹೆಗ್ಗಳಿಕೆ.



> **ದೊಡ್ಡಾಟದ ಮೂಲಕ ಮನೆಯ ನಾಲ್ಕು ಗೋಡೆಗಳಿಂದ ಹೊರಬಂದು ಜಗತ್ತನ್ನೆ ಕಾಣುವಂತೆ ಮಾಡಿದವರು ನಮ್ಮ ಅಶೋಕ್ ಸರ್**
>
> **– ಅಶ್ವಿನಿ. ವಿದ್ಯಾರ್ಥಿ**


SUNDAY EXPRESS SUNDAY STORY

SUNDAY 08.10.2017

# WHEN DODDATTA BROUGHT BACK DROPOUTS

A drama teacher used a dying art form to woo students to school in a village on the Telangana border. Thanks to Ashok Totnalli, the art and the school are thriving

ತಮ್ಮ ಪೋಷಕರ ಹಾಗೂ ಊರ ಹಿರಿಯರ ಸಹಕಾರದಿಂದ ವಿದ್ಯಾರ್ಥಿಗಳು ದೊಡ್ಡಾಟಕ್ಕೆ ಅಗತ್ಯವಿರುವ ಸಾಮಗ್ರಿಗಳ ತಯಾರಿ, ಸಂಭಾಷಣೆ ರಚನೆ ಹಾಗೂ ಪ್ರದರ್ಶನ ಎಲ್ಲವನ್ನೂ ನಿರ್ವಹಿಸುವುದರಿಂದ ಅವರಲ್ಲಿ ಸ್ವಕಲಿಕೆ ಹಾಗೂ ಸ್ವತಂತ್ರ ಆಲೋಚನಾ ಸಾಮರ್ಥ್ಯ ಬೆಳೆಯಲು ಸಾಧ್ಯವಾಗಿದೆ.

ಗುರು ಶಿಷ್ಯರ ಅತ್ಯಧಿಕ ಶ್ರಮ ಶಿಸ್ತು, ಸಮಯಪಾಲನೆ ನಿಗದಿತ ವೇಳಾಪಟ್ಟಿಯೊಂದಿಗೆ ಕ್ರಮಬದ್ಧವಾದ ನಿರ್ವಹಣೆ ಈ ಯೋಜನೆಯ ಯಶಸ್ಸಿಗೆ ಕಾರಣವೆನ್ನಬಹುದು.


ದೊಡ್ಡಾಟದ ಮಟ್ಟುಗಳನ್ನು ಪ್ರದರ್ಶಿಸುತ್ತಿದ್ದಾರೆ ಜಾಕನಪಲ್ಲಿ ಮಕ್ಕಳು.



**ಅಶೋಕ ತೊಟ್ನಳ್ಳಿ**
ನಾಟಕ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ
ಜಾಕನಪಲ್ಲಿ, ಸೇಡಂ ತಾ.,
ಗುಲ್ಬರ್ಗ ಜಿಲ್ಲೆ.
9740201002
ashok80totnalli@gmail.com

ಯಶೋಗಾಥೆ

## ಕರ್ನಾಟಕ ಸರ್ಕಾರಿ ಶಾಲೆಗಳ ಶಿಕ್ಷಕ/ಶಿಕ್ಷಕಿಯರಿಂದ ಯೋಜನಾ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐ.ಎಫ್.ಎ) ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಕಲಾ ಶಿಕ್ಷಣ ನೀಡಲು ಶಾಲಾ ಶಿಕ್ಷಕ/ಶಿಕ್ಷಕಿಯರಿಂದ ಯೋಜನಾ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ. ಇದು ಈಗಾಗಲೇ ಚಾಲ್ತಿಯಲ್ಲಿರುವ 'ಕಲಿ–ಕಲಿಸು' ಯೋಜನೆಯ ಮುಂದುವರಿಕೆ ಭಾಗವಾಗಿದೆ. ಶಿಕ್ಷಕರು, ಶಾಲಾ ಸಮುದಾಯ ಹಾಗೂ ಸ್ಥಳೀಯ ಕಲಾವಿದರ ಸಂಬಂಧವನ್ನು ಗಟ್ಟಿಗೊಳಿಸುವುದು ಈ ಯೋಜನೆಯ ಮುಖ್ಯ ಗುರಿ.

ಈ ಅನುದಾನ ಮುಖ್ಯ ಉದ್ದೇಶವೆಂದರೆ ಶಿಕ್ಷಕರು ತಮ್ಮ ವಿಷಯದ ಪರಿಮಿತಿಯ ಚೌಕಟ್ಟನ್ನು ದಾಟಿ, ಕಲಾ ಪ್ರಕಾರಗಳನ್ನು ತಾವು ಕಲಿಸುತ್ತಿರುವ ವಿಷಯಗಳಲ್ಲಿ ಅಳವಡಿಸಿಕೊಳ್ಳುವುದು, ಈ ಮೂಲಕ ಎಲ್ಲಾ ವಿಷಯಗಳ ಪಠ್ಯಕ್ರಮದಲ್ಲಿ ಹಾಗೂ ತರಗತಿಯಲ್ಲಿ ಸ್ಥಳೀಯ ಕಲಾಪ್ರಕಾರಗಳನ್ನು ಅಳವಡಿಸಿಕೊಂಡು ಕಲಾವಿದರಿಗೆ ಹಾಗು ಶಿಕ್ಷಕರಿಗೆ ಹೊಸ ಕಲಿಕೆಯ ಅವಕಾಶವನ್ನು ಕಲ್ಪಿಸುವುದಾಗಿದೆ. ಅದರ ಜೊತೆಗೆ ಪರಿಸರ ಹಾಗೂ ಜಾನಪದ ಸಂಸ್ಕೃತಿಯನ್ನು ಶಾಲಾ ಶಿಕ್ಷಣದಲ್ಲಿ ಮತ್ತೆ ಪರಿಚಯ ಮಾಡುವ ಕೆಲಸ ಆಗಿದೆ.

ಅನುದಾನದ ಅವಧಿಯ ನಂತರವೂ ಯೋಜನಾ ಕಾರ್ಯಕ್ರಮವು ಮುಂದುವರೆಯಬಹುದಾದ ಎಲ್ಲಾ ಸಾಧ್ಯತೆಗಳು ಸಂಸ್ಥೆಗೆ ಇದೆ.

### ಈ ಯೋಜನಾ ಪ್ರಸ್ತಾವಕ್ಕೆ ಬೇಕಾದ ಅರ್ಹತೆ:

ಸರ್ಕಾರಿ ಶಾಲಾ ವಿಷಯಶಿಕ್ಷಕರು, ಕಲಾಶಿಕ್ಷಕರು, ಡಿಸ್ಟ್ರಿಕ್ಟ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್ (DIET)ನ ಉಪನ್ಯಾಸಕರು.

### ಯೋಜನೆಯ ವ್ಯಾಪ್ತಿ:

ಯೋಜನೆಯ ವ್ಯಾಪ್ತಿಯಲ್ಲಿ ಕೆಳಕಂಡ ಯಾವುದಾದರೊಂದು ಅಂಶವಿರಬೇಕು. ಪೋಷಕರು, ವಿದ್ಯಾರ್ಥಿಗಳು, ಶಿಕ್ಷಕರು, ಕಲಾಸೇವೆಯಲ್ಲಿ ತೊಡಗಿರುವವರೂ ಒಳಗೊಂಡಂತೆ ಇನ್ನೂ ಹಲವು ಪಾಲುದಾರರನ್ನು ಕಲಾ ಯೋಜನೆಯ ಪರಿಧಿಯಲ್ಲಿ ತರಬೇಕು.

ಬೋಧನೆಯಲ್ಲಿ ಸ್ಥಳೀಯ ಹಾಗೂ ಪ್ರಾಂತೀಯ ಕಲಾ ಪ್ರಕಾರಗಳನ್ನು ಬಳಸಿಕೊಳ್ಳುವ ಮೂಲಕ ಕಲಿಕೆಯನ್ನು ಶ್ರೀಮಂತಗೊಳಿಸುವುದು.

ವಿದ್ಯಾರ್ಥಿಕೇಂದ್ರಿತ ಕಲಿಕೆಗೆ ಪ್ರೊತ್ಸಾಹಿಸುವುದು. ಉದಾಹರಣೆಗೆ ಕಲಾ ಪ್ರಕಾರಗಳನ್ನು ಪರಿಚಯಿಸಿ, ಮಕ್ಕಳು ವಿವಿಧ ಕಲಾ ಪ್ರಕಾರಗಳಲ್ಲಿ ನಿರಂತರವಾಗಿ ತೊಡಗುವಂತೆ ಪ್ರೊತ್ಸಾಹಿಸುವುದು. ಅವುಗಳ ಬಗ್ಗೆ ನಿತ್ಯ ಅನುಭಾವಿಸುವುದು ಹಾಗೂ ಹೆಚ್ಚೆಚ್ಚು ಅಭ್ಯಸಿಸುವ ಕೆಲಸ ಆಗುಮಾಡುವುದು (ರಂಗಕಲೆ, ಚಿತ್ರಕಲೆ, ಸಿನೆಮಾ, ಸಾಹಿತ್ಯ, ಫೋಟೋಗ್ರಫಿ, ಸಂಗೀತ ಇತ್ಯಾದಿ)

ಈ ಯೋಜನೆಯು ಕಲಾ ಕಲಿಕೆಯ ಮೂಲಕ ಸಾಮಾಜಿಕ ನ್ಯಾಯ ಮತ್ತು ಪರಿಸರ ಸಂಬಂಧಿ ಅರಿವು ಮೂಡಿಸಲು ಶಾಲೆ ಸಮುದಾಯವನ್ನು ಪ್ರೇರೇಪಿಸುವಲ್ಲಿ ಸಹಕಾರಿಯಾಗಬೇಕು.

ಇತರ ಅಲ್ಪಾವಧಿ ಹಾಗು ದೀರ್ಘಾವಧಿಯ, ನವೀನ ಹಾಗು ಸೃಜನಶೀಲ ಯೋಜನೆಗಳನ್ನು ಸಹ ಪರಿಗಣಿಸಲಾಗುವುದು.

**ಅನುದಾನಕ್ಕೆ ಆಯ್ಕೆಯಾದ ಶಿಕ್ಷಕರಿಂದ ನಿರೀಕ್ಷೆಗಳೇನೆಂದರೆ:**

ಮುಂದಿನ ದಿನಗಳಲ್ಲಿ ಅನುಷ್ಟಾನಕ್ಕೆ ತರಬಲ್ಲ ಒಂದು ಸಂಪೂರ್ಣ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಬೇಕು. ಯೋಜನೆಯು ಸರಿಯಾದ ಕ್ರಮದಲ್ಲಿ ನಡೆಯುತ್ತಿರುವುದನ್ನು ತೋರಿಸಲು ಕಾಲಕಾಲಕ್ಕೆ ಸರಿಯಾದ ದಾಖಲೆಗಳನ್ನು ಸಂಸ್ಥೆಗೆ ಒದಗಿಸಬೇಕು. (ದಾಖಲೆಗಳು ಛಾಯಾಚಿತ್ರ/ಆಡಿಯೋ/ ವಿಡಿಯೋ/ವರದಿಯ ರೂಪದಲ್ಲಿರಬೇಕು)

ಯೋಜನಾ ಅವಧಿಯಲ್ಲಿ ಮಧ್ಯಂತರ ವರದಿ ಹಾಗು ಯೋಜನೆಯ ಕೊನೆಯಲ್ಲಿ ಸಮಗ್ರ ವರದಿಯನ್ನು, ದಾಖಲೆ ಸಮೇತ ಸಲ್ಲಿಸಬೇಕು. ಯೋಜನಾ ಅವಧಿಯ ನಂತರ ಹಣಕಾಸಿನ ವರದಿಯ ಜೊತೆ ಯೋಜನೆಯ ಸಂಪೂರ್ಣ/ಸವಿಸ್ತಾರ ವರದಿ ಸಲ್ಲಿಸಬೇಕು. ಅಂತಿಮ ವರದಿಯಲ್ಲಿ ಅನುದಾನ ಸಂಬಂಧಿಸಿದ ಚಟುವಟಿಕೆಗಳು, ಎದುರಾದ ಸಮಸ್ಯೆಗಳು ಮತ್ತು ಕಲಿಕೆಗಳನ್ನು ದಾಖಲಿಸಬೇಕು.

**ಯೋಜನಾ ಪ್ರಸ್ತಾವನೆ ಸಲ್ಲಿಸುವ ಪ್ರಕ್ರಿಯೆಯ ಮಾರ್ಗಸೂಚಿ:**

ನಿಮ್ಮ ಯೋಜನೆಯು ಈ ಕೆಳಕಂಡ ವಿಷಯಗಳ ವಿವರಗಳನ್ನು ಒಳಗೊಂಡಿರಬೇಕು.

ನಿಮ್ಮ ಯೋಜನೆಯ ಕಲ್ಪನೆ ನೀವು ಕೆಲಸ ಮಾಡುತ್ತಿರುವ ಶಾಲೆಗೆ ಸಂಬಂಧಿಸಿದಂತೆ ಆಗಿರಬೇಕು.

ಪ್ರಸ್ತುತ ನೀವು ನಿರ್ವಹಿಸುತ್ತಿರುವ ಪಾತ್ರ ಮತ್ತು ಜವಾಬ್ದಾರಿಗಳು.

ನಿಮ್ಮ ಪ್ರಸ್ತಾವಿತ ಕೆಲಸದ ಯೋಜನೆ ಹಾಗು ಶಾಲೆಯಲ್ಲಿ ನೀವು ಬಳಸುವ ವಿಧಾನದ ವಿವರ

ನಿಮ್ಮ ಯೋಜನೆಯ ಫಲಿತಾಂಶವು ಕಲಾ ಶಿಕ್ಷಣ ಕ್ಷೇತ್ರಕ್ಕೆ ಯಾವ ರೀತಿ ಕೊಡುಗೆ ನೀಡುತ್ತದೆ ಎಂಬ ವಿವರ

ಯೋಜನೆಯ ನಿರೀಕ್ಷಿತ ಕಾಲಾವಧಿ. ನಿಮ್ಮ ಯೋಜನೆಯು ಕನಿಷ್ಟ ಒಂಬತ್ತು ತಿಂಗಳದ್ದಾಗಿರಬೇಕು ಹಾಗು ಗರಿಷ್ಟ 18 ತಿಂಗಳ ಅವಧಿಯದ್ದಾಗಿರಬೇಕು.

ಯೋಜನಾವಧಿಗೆ ಬೇಕಾದ ಹಣಕಾಸಿನ ವಿವರ

ನಿಮ್ಮ ಯೋಜನೆಯನ್ನು ಕನ್ನಡ, ಉರ್ದು, ಹಿಂದಿ ಹಾಗು ಇಂಗ್ಲೀಷ್ ಭಾಷೆಯಲ್ಲಿ ಬರೆಯುಬಹುದು.

**ಬಜೆಟ್:**

ರೂ. 1,00,000/– ವರೆಗೆ ಧನಸಹಾಯ ದೊರೆಯುತ್ತದೆ. ಪ್ರತಿ ಬಜೆಟ್ ಯೋಜನೆಗೆ ಸಂಬಂಧಿಸಿದ ನಿರ್ದಿಷ್ಟ ಖರ್ಚು ವೆಚ್ಚಗಳ ವಿವರ ಹೊಂದಿರಬೇಕು.

ಯೋಜನೆಗೆ ಸಂಬಂಧಿಸಿದ ವೈಯಕ್ತಿಕ ಖರ್ಚು, ಪ್ರಯಾಣ ಹಾಗು ಚಟುವಟಿಕೆಗಳ ವಿವರ ಹೊಂದಿರಬೇಕು. ಪ್ರಸ್ತಾವನೆಗೆ ಸಂಬಂಧಿಸಿದಂತೆ ಅಗತ್ಯವಿರುವ ನೂತನ ಉಪಕರಣಗಳನ್ನು ಮತ್ತು ವಸ್ತುಗಳನ್ನು ಕೊಳ್ಳಲು ಅವಕಾಶವಿರುತ್ತದೆ.

ಸಾಂಸ್ಥಿಕ ಖರ್ಚು ವೆಚ್ಚಗಳು, ಕಟ್ಟಡದ ಖರ್ಚು ವೆಚ್ಚಗಳು ಮತ್ತು ಹೊಸ ಕಾಮಗಾರಿಗಳಿಗಾಗಿ ಅನುದಾನವಿರುವುದಿಲ್ಲ.

ಇಡೀ ಯೋಜನಾವಧಿಗೆ ನಿಮ್ಮ ಗೌರವಧನ ಹತ್ತು ಸಾವಿರ ಮೀರಿರಬಾರದು. ಹೊರಗಿನ ಸಂಪನ್ಮೂಲ ವ್ಯಕ್ತಿಗಳ ಗೌರವಧನ 20 ಸಾವಿರ ಮೀರಿರಬಾರದು.

ಹೆಚ್ಚಿನ ಮಾಹಿತಿಗಾಗಿ ಕೆಳಗೆ ನೀಡಿರುವ ಕಲಿ–ಕಲಿಸು ಸಂಪರ್ಕಜಾಲಕ್ಕೆ ಭೇಟಿ ನೀಡಿ.

**http://www.indiaifa.org/programmes/arts-education.html**

# ಒಂದಷ್ಟು ಚಿತ್ರಗಳು



ಬ್ಲಾಕ್ ಮಟ್ಟದ ತರಬೇತಿ ಶಿವಮೊಗ್ಗ





ಕ್ಷೇತ್ರ ಪ್ರವಾಸ ಕೊಚ್ಚಿಬಿನಾಲೆ





ಬ್ಲಾಕ್ ಮಟ್ಟದ
ತರಬೇತಿ
ಸೊಗಲ



ಬ್ಲಾಕ್ ಮಟ್ಟದ
ತರಬೇತಿ
ಬೈಂದೂರು



ಟ್ರೈಟನ್ ಪ್ರಾಯೋಜಿಸಿದ ಎಸ್‌ವಿವೈಎಂ ತರಬೇತಿ





ವಿಭಾಗ ಮಟ್ಟದ ತರಬೇತಿ ಕಲಬುರ್ಗಿ





ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್,
ಅಪೂರ್ವ, ನೆಲಮಹಡಿ
ನಂ. 259, 4ನೇ ಕ್ರಾಸ್,
ರಾಜ ಮಹಲ್ ವಿಲಾಸ್, 2ನೇ ಹಂತ,
2ನೇ ಬ್ಲಾಕ್,
ಬೆಂಗಳೂರು 5600094
ದೂರವಾಣಿ: 080–2341 4681/82